RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 ಸಂಪುಟ 4 | Issue 13 ಸಂಚಿಕೆ 13 | Date 01-05-2025 | Page 16 ಪುಟ 16 | ಬೆಲೆ: 20/- | FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಮೋ.ನಂ: 9986366909

## ಮುಂಡಗೋಡ: ಹೆಚ್ಚಾದ ನಕಲಿ ಪತ್ರಕರ್ತರ ಹಾವಳಿ, ಗೋಮುಖ ವ್ಯಾಘ್ರಗಳಿಗೆ ಕಡಿವಾಣ ಹಾಕೋರು ಯಾರು?






## ಬಳಕೆಯಾಗದೆ ಅನೈತಿಕ ಚಟುವಟಿಕೆಗಳ ತಾಣವಾಗಿರುವ ಸರಕಾರಿ ಕಟ್ಟಡಗಳು

## ಕ್ರಿಕೆಟ್ ಆಟಗಾರರು ಕೈಗೆ ಕಪ್ಪುಪಟ್ಟಿ ಕಟ್ಟಿ ಆಡುತ್ತಿರುವುದಕ್ಕೆ ಕಾರಣ ಏನು ?




## ಮದ್ಯದ ನಶೆಯಲ್ಲಿ ಚಿಕಿತ್ಸೆ ನೀಡಿದ ಸರ್ಕಾರಿ ವೈದ್ಯ

## ಪರೋಪಕಾರಿ, ಸ್ನೇಹಜೀವಿ, ಯುವಕರ ನೆಚ್ಚಿನ ನಾಯಕ ಶ್ರೀ ಸುನೀಲ್ ವರ್ಣೇಕರ



## ಬಸವಣ್ಣನವರ ದೃಷ್ಟಿಯಲ್ಲಿ ದೇವರೆಂದರೆ..!?



## ಪಾರ್ವತಿ



## ಊರು ಬಿಡುವ ಆಚರಣೆಯ ಗುಳೆ ಲಕ್ಕಮ್ಮ ಜಾತ್ರೆ

## ದುಷ್ಟ ಜನರು ಹಾಗೂ ಅಪ್ರಾಮಾಣಿಕ ಅಧಿಕಾರಿಗಳಿಂದ ರಕ್ಷಣೆ ನೀಡಿದ ಕಾನೂನು ಅಧ್ಯಯನ



ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಶೀಘ್ರದಲ್ಲಿ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಆರಂಭ : ಚನ್ನಬಸಪ್ಪ ಮುಧೋಳ್



**ಯಾದಗಿರಿ/ ಗುರುಮಠಕಲ್:** ಬಹು ದಿನಗಳ ಬೇಡಿಕೆ ಆಗಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಕೊನೆಗೂ ಈಡೇರುವ ಕಾಲ ಕೂಡಿ ಬಂದಿದೆ, ಕಲಬುರಗಿ ಜಿಲ್ಲೆಯ ಕಮಲಾಪುರ ತಾಲೂಕಿನಲ್ಲಿ ಹೊಸದಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಆರಂಭವಾಗಿರುವ ಹಿನ್ನಲೆಯಲ್ಲಿ ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿಗೆ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಆರಂಭಿಸುವ ಉದ್ದೇಶದಿಂದ ಯಾದಗಿರಿ ಜಿಲ್ಲೆಯ ಮಾನ್ಯ ಉಪ ನಿರ್ದೇಶಕರಾದ ಚನ್ನಬಸಪ್ಪ ಮುಧೋಳ್ ರವರು ಗುರುಮಠಕಲ್ ನಗರದ ಸರ್ಕಾರಿ ಕೇಂದ್ರ ಪ್ರಾಥಮಿಕ ಶಾಲೆ ವೀಕ್ಷಣೆ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮಾಡಲು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿದರು. ತಾಲೂಕಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಅವಶ್ಯಕತೆ ಇದ್ದು, ಕಾರ್ಯಾಲಯಕ್ಕೆ ಬೇಕಾಗಿರುವ ಎಲ್ಲಾ ಸೌಲಭ್ಯವನ್ನು ಪರಿಶೀಲನೆ ಕಾರ್ಯ ನಡೆದಿದೆ, ಶೀಘ್ರದಲ್ಲಿಯೇ ಪ್ರಾರಂಭವಾಗುವ ಭರವಸೆ ಇದೆ ಎಂದು ತಿಳಿಸಿದರು.




ಈ ಸಂದರ್ಭದಲ್ಲಿ ವಿಷಯ ಪರಿವೀಕ್ಷಕರಾದ ಹನುಮಂತ, ಶಿಕ್ಷಣ ಸಂಯೋಜಕರಾದ ರವೀಂದ್ರ, ಬಾಲಪ್ಪ ಸಮೂಹ ಸಂಪನ್ಮೂಲ ವ್ಯಕ್ತಿ ಸಿ. ಆರ್. ಪಿ, ಸೈಯದ್ ಬಾಬಾ ಸಿ.ಆರ್.ಪಿ , ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಧ್ಯಕ್ಷರಾದ ನಾರಾಯಣ ರೆಡ್ಡಿ, ಮುಖ್ಯ ಗುರುಗಳಾದ ಹನುಮಂತ್ ರಾವ್ ರಾಮುಲು, ಶ್ರೀಮತಿ ಹೇಮಲತಾ, ಸಂಪತ್ ಕುಮಾರ್ ಹಾಜರಿದ್ದರು.


**ವರದಿ: ಜಗದೀಶ್ ಕುಮಾರ್**

# ಅಭಿನಂದನೆಗಳು



**ಯಾದಗಿರಿ/ ಗುರುಮಠಕಲ್ :** ಕರ್ನಾಟಕ ರಾಜ್ಯ ಎನ್ .ಪಿ. ಎಸ್ ನೌಕರರ ಸಂಘ (ರಿ.) ಗುರುಮಠಕಲ್ ತಾಲೂಕಿನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಬಾಲಪ್ಪ ಸಿರಿಗೆಂ ಅವರಿಗೆ ಗುರುಮಠಕಲ್ ಪುರಸಭೆ ಕಾರ್ಯಾಲಯದ ಮುಖ್ಯಾಧಿಕಾರಿಗಳಾದ ಶ್ರೀಮತಿ ಭಾರತಿ ದಂಡೋತಿ ಹಾಗೂ ಸಿಬ್ಬಂದಿಯವರಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಪರಶುರಾಮ ನರಬೋಳ, ರಾಮುಲು, ಅಶೋಕ್, ಮಲ್ಲಮ್ಮ, ಶಶಿಧರ್ ಮಠ, ನೀಲಮ್ಮ, ವೀರಭದ್ರಪ್ಪ, ಮಲ್ಲಯ್ಯ, ಶ್ರೀನಿವಾಸ, ಬಾಬಾ, ನರಸಿಂಹುಲು, ರಾಕೇಶ್ ಮತ್ತು ರಾಜಕೀಯ ಮುಖಂಡರಾದ ಶರಣಪ್ಪ ಧರಂಪುರ ಇದ್ದರು.

**ವರದಿ: ಜಗದೀಶ್ ಕುಮಾರ್**



ಬಳ್ಳಾರಿ ಜಿಲ್ಲೆಯ ಕಂಪ್ಲಿಯ ತಹಶೀಲ್ದಾರರು ಹಾಗೂ ತಾಲೂಕು ದಂಡಾಧಿಕಾರಿಗಳಾದ ಶ್ರೀ ಶಿವರಾಜ್ ಅವರು ಕರುನಾಡ ಕಂದ ಪತ್ರಿಕೆ ಓದುತ್ತಿರುವುದು.

# ಬಳಕೆಯಾಗದೆ ಅನೈತಿಕ ಚಟುವಟಿಕೆಗಳ ತಾಣವಾಗಿರುವ ಸರಕಾರಿ ಕಟ್ಟಡಗಳು

## ಹಾಳು ಬಿದ್ದು, ಪುಂಡರ ಅಡ್ಡೆಯಾಗಿರುವ ಟೌನ್ ಹಾಲ್ ಸರ್ಕಾರಿ ಕಚೇರಿಗೆ ಬಳಸಿಕೊಳ್ಳಿ: ಗದ್ದಿಗಿ ಆಗ್ರಹ

**ಯಾದಗಿರಿ:** ಗುರುಮಠಕಲ್ ಪಟ್ಟಣದ ತಹಶೀಲ್ದಾರ ಕಚೇರಿ ಪಕ್ಕದಲ್ಲಿರುವ ಪುರಭವನ (ಟೌನ್ ಹಾಲ್) ಕಟ್ಟಡ ಬಳಕೆ ಇಲ್ಲದೇ ಹಾಳು ಬಿದ್ದಿದ್ದು ಪುಂಡ ಪೋಕರಿಗಳ ಅಡ್ಡೆಯಾಗಿ ಪರಿವರ್ತನೆಗೊಂಡಿದ್ದು, ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಜಯಕರ್ನಾಟಕ ಸಂಘಟನೆ ಒತ್ತಾಯಿಸಿದೆ.



ಈ ಕುರಿತು ಹೇಳಿಕೆ ನೀಡಿರುವ ತಾಲ್ಲೂಕು ಅಧ್ಯಕ್ಷ ನಾಗೇಶ ಗದ್ದಿಗಿ, 2016-17ನೇಸಾಲಿನಲ್ಲಿ ಕೆಕೆಆರ್‌ಡಿಬಿ ಅನುದಾನದಲ್ಲಿ ಅಂದಾಜು 1.90 ಕೋಟಿಗೂ ಹೆಚ್ಚು ಖರ್ಚು ಮಾಡಿ ನಿರ್ಮಿಸಿದ ಕಟ್ಟಡ ವ್ಯರ್ಥವಾಗಿ ಹಾಳಾಗಿ ಪುಂಡ ಪೋಕರಿಗಳಿಗೆ ಅನೈತಿಕ ಚಟುವಟಿಕೆಗಳ ತಾಣವಾಗಿದೆ.

ರಾತ್ರಿಯಾದರೆ ಸಾಕು ಕುಡುಕರ ಅಡ್ಡೆಯಾಗಿ ಬದಲಾಗುವ ಟೌನ್ ಹಾಲ್ ಅಕ್ರಮ ಅನೈತಿಕ ನೈಟ್ ಕ್ಲಬ್ ಆಗಿ ಬದಲಾಗಿದೆ, ಈ ಕಟ್ಟಡದ ಕಿಟಕಿ ಬಾಗಿಲುಗಳನ್ನು ಧ್ವಂಸ ಮಾಡಿರುವ ಕುಡುಕರು ಕಟ್ಟಡವನ್ನು ಭೂತ ಬಂಗ್ಲೆಯಾಗಿ ಪರಿವರ್ತಿಸಿದ್ದಾರೆ ಎಂದು ಅವರು ದೂರಿದ್ದಾರೆ. ಕೂಡಲೇ ಕ್ರಮ ಕೈಗೊಂಡು ಈ ಕಟ್ಟಡವನ್ನು ಯಾವುದಾದರೂ ಸರ್ಕಾರಿ ಕಚೇರಿಯನ್ನಾಗಿ ಬದಲಿಸಬೇಕು, ಸರ್ಕಾರದ ಹಣ ವ್ಯರ್ಥವಾಗುತ್ತಿದೆ ಈ ಹಿಂದೆ ತಾಲ್ಲೂಕು ನ್ಯಾಯಾಲಯ ಸಂಕೀರ್ಣವಾಗಿಸಲು ಬಿಡುಗಡೆಮಾಡಿದ 50 ಲಕ್ಷ ರೂ. ಗಳನ್ನು ವಾಪಸ್ ಪಡೆದಿದ್ದರಿಂದ ಮತ್ತೆ ಈ ಕಟ್ಟಡ ಹಾಳು ಕೊಂಪೆಯಂತಾಗಿದೆ, ತಾಲ್ಲೂಕು ಕೇಂದ್ರದಲ್ಲಿ ಕಚೇರಿಗಳು ಇಲ್ಲ ಎಂಬ ಸಬೂಬು ಹೇಳುವ ಸರ್ಕಾರ ಇಂತಹ ಕಟ್ಟಡಗಳನ್ನು ಬಳಸಿಕೊಂಡು ಇಲಾಖೆಗಳ ಕಚೇರಿ ಆರಂಭಿಸಲು ಮುಂದಾಗಬೇಕೆಂದು ಅವರು ಒತ್ತಾಯಿಸಿದ್ದಾರೆ.

ತಹಶೀಲ್ದಾರರ ಕಚೇರಿ ಪಕ್ಕದಲ್ಲೇ ಇದ್ದರೂ ತಹಶೀಲ್ದಾರ ಸೇರಿದಂತೆ ಯಾವೊಬ್ಬ ಅಧಿಕಾರಿಗಳೂ ಈ ಬಗ್ಗೆ ಯೋಚಿಸದೇ ಇರುವುದು ಅಧಿಕಾರ ನಡೆಸುತ್ತಿರುವವರ ಕಾರ್ಯವೈಖರಿಯನ್ನು ಬಿಂಬಿಸುತ್ತಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದು, ಇದಲ್ಲದೇ ಪಟ್ಟಣದ ಹಳೆ ಐ. ಟಿ. ಐ ಕಾಲೇಜು , ಸಾಕಷ್ಟು ಕಟ್ಟಡಗಳು ಉಪಯೋಗಿಸದೇ ಇರುವುದು ಹಾಗೂ ಅವುಗಳ ಕಡೆ ಸಹ ಗಮನ ಕೊಡಬೇಕು, ಕೂಡಲೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಗೌರವಾಧ್ಯಕ್ಷ ಮಲ್ಲಿಕಾರ್ಜುನ ಕಾಕಲವಾರ, ಉಪಾಧ್ಯಕ್ಷ ಕಾಶಪ್ಪ ದೊರೆ, ಕಾರ್ಯಾಧ್ಯಕ್ಷ ನರಸಿಂಹಲು, ನಗರಾಧ್ಯಕ್ಷ ಮಹೇಶ ಗೌಡ, ಮುಖಂಡರಾದ ಉದಯಕುಮಾರ, ನಾರಾಯಣ ಮಜ್ಜಿಗೆ, ರಾಮುಲು ಕೊಡಗಂಟಿ, ಅಯಾಜ್, ರವಿ ವಾರದ, ಬನ್ನಪ್ಪ ಮಡಗು, ನರೇಶ ಮಜ್ಜಿಗೆ ಇನ್ನಿತರರು ಎಚ್ಚರಿಕೆ ನೀಡಿದ್ದಾರೆ.

**ವರದಿ: ಜಗದೀಶ್ ಕುಮಾರ್**



ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಹಕ್ಕು ಪತ್ರಗಳನ್ನು ವಿತರಿಸಿ ಇಲ್ಲವಾದಲ್ಲಿ ಸತ್ಯಾಗ್ರಹ ಎದುರಿಸಿ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಪಟ್ಟಣದ ಹರಳಯ್ಯ ಕಾಲೋನಿ ನಿವಾಸಿಗಳಿಗೆ ಶೀಘ್ರವಾಗಿ ಮನೆಗಳ ಹಕ್ಕು ಪತ್ರಗಳನ್ನು ವಿತರಿಸಬೇಕು ಇಲ್ಲವಾದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಕಚೇರಿ ಮುಂದೆ ಅನಿವಾರ್ಯವಾಗಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಇದೇ ವಿಷಯವಾಗಿ ಈ ಮೊದಲು ಹಲವಾರು ಬಾರಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಮತ್ತು ಅಧಿಕಾರಿಗಳಿಗೆ ರಾಜಕಾರಣಿಗಳಿಗೆ ಎಷ್ಟೋ ಸಲ ಮನವಿ ಸಲ್ಲಿಸಲಾಗಿದ್ದರೂ ನಮ್ಮ ಮನವಿಗೆ ಅಧಿಕಾರಿಗಳು ಹಾಗೂ ಬೈಲಹೊಂಗಲ ಮತಕ್ಷೇತ್ರದ ಶಾಸಕರು ಮನೆಗಳ ಹಕ್ಕು ಪತ್ರ ನೀಡದೇ ಇದ್ದ ಕಾರಣ ಬೇಸತ್ತು ಹೋಗಿದ್ದೇವೆ ಕಾರಣ ತಮ್ಮ ಇಲಾಖೆ ಮುಂದೆ “ನಮ್ಮ ಮನೆ ನಮ್ಮ ಹಕ್ಕು” ಎನ್ನುತ್ತಾ ಮನೆಗಳ ಹಕ್ಕು ಪತ್ರ ನೀಡುವವರೆಗೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಹಾಗೂ ಸತ್ಯಾಗ್ರಹದಲ್ಲಿ ಉಂಟಾಗುವ ಪ್ರತಿಯೊಂದು ಅನಾರೋಗ್ಯದ ಸಮಸ್ಯೆಗಳಿಗೆ ತಾವೇ ಹೊಣೆ ಎಂದು ಕರ್ನಾಟಕ ಅಂಬೇಡ್ಕರ್ ಯುವ ಸೇನೆಯ ರಾಜ್ಯ ಉಪಾಧ್ಯಕ್ಷ ಪರಶುರಾಮ ರಾಯಬಾಗ ಮಾತನಾಡಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾಂವಿ ಸಹಾಯಕ ಕಾರ್ಯ ಪಾಲಕ ಪ್ರದೀಪ್ ದಳವಾಯಿ ಅವರಿಗೆ ಮನವಿ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಅಲೆಮಾರಿ ಬುಡಕಟ್ಟು ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಹನುಮಂತ ಟಿಕೋಳ , ರಾಜ್ಯ ಉಪಾಧ್ಯಕ್ಷರಾದ ಪರಶುರಾಮ ರಾಯಬಾಗ, ಮುಸ್ಲಿಂ ಸಮಾಜದ ಮುಖಂಡರಾದ ರಿಯಾಜ್ ಅನ್ಸಾರಿ, ಹರಳಯ್ಯ ಸಮಾಜದ ಮುಖಂಡರು ಶ್ರೀಕಾಂತ್ ದೊಡ್ಮನಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

– ಕರುನಾಡ ಕಂದ

## ಮಲೆ ಮಹದೇಶ್ವರ ಬೆಟ್ಟದಲ್ಲಿ ಮುಖ್ಯಮಂತ್ರಿಗಳಿಂದ ಪ್ರಾಧಿಕಾರದ ವಿವಿಧ ಕಾಮಗಾರಿಗಳ ಉದ್ಘಾಟನೆ , ಶಂಕುಸ್ಥಾಪನೆ



**ಚಾಮರಾಜನಗರ :** ಜಿಲ್ಲಾಡಳಿತ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಪೂರ್ಣಗೊಂಡಿರುವ ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಮಹದೇಶ್ವರಬೆಟ್ಟದ ವಜ್ರಮಲೆ ಭವನದ ಎದುರು ಆವರಣದಲ್ಲಿ ನೆರವೇರಿಸಿದರು.

ಮೈಸೂರಿನ ಮತ್ತುಸ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಸಾಲೂರು ಬೃಹನ್ಮಠಾಧ್ಯಕ್ಷರು ಹಾಗೂ ಪೀಠಾಧಿಪತಿಗಳಾದ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ದಿವ್ಯ ಸಮ್ಮುಖ ವಹಿಸಿದ್ದರು. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ,ಸಮಾಜ ಕಲ್ಯಾಣ ಸಚಿವರಾದ ಡಾ ಹೆಚ್. ಸಿ. ಮಹದೇವಪ್ಪ ಅವರು ಘನ ಉಪಸ್ಥಿತರಿದ್ದರು.

ಶಾಸಕರಾದ ಎಂ. ಆರ್. ಮಂಜುನಾಥ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಂ. ಎಸ್. ಐ. ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಡಾ. ಡಿ. ತಿಮ್ಮಯ್ಯ, ಹಿರಿಯ ಅಧಿಕಾರಿ ಎಲ್. ಕೆ. ಅತೀಕ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ. ಟಿ. .ಕವಿತಾ, ಮಲೈ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ. ಈ. ರಘು ಮತ್ತಿತರ ಗಣ್ಯರು ಭಾಗವಹಿಸಿದ್ದರು.

ವರದಿ ಉಸ್ಮಾನ್ ಖಾನ್

## ವಿಕಲಚೇತನ ಸಿಬ್ಬಂದಿ ಮುಂಬಡ್ತಿ ಬಗ್ಗೆ ವಿಚಾರಣೆ




**ನವದೆಹಲಿ:** ಬೆಂಗಳೂರಿನ ಕೆನರಾ ಬ್ಯಾಂಕ್ ನಲ್ಲಿ ದುಡಿದಿದ್ದ ವಿಕಲಚೇತನ ಸಿಬ್ಬಂದಿಯ ಬಡ್ತಿ ವಿವಾದದ ಕುರಿತು ಕೋರ್ಟು ವಿಚಾರಣೆಯು ನವದೆಹಲಿಯ ಅಂಗವಿಕಲರ ಮುಖ್ಯ ಆಯುಕ್ತರ ನ್ಯಾಯಾಲಯದಲ್ಲಿ ಆನ್‌ಲೈನ್ ಮುಖಾಂತರ ದಿ. 17–4–2025 ರಂದು ದಿನ ವಿಚಾರಣೆ ನಡೆಸಿದರು.

ಇಂಡಿಯನ್ ದಿವ್ಯಾಂಗ್ ಎಂಪವರ್ಮೆಂಟ್ ಅಸೋಸಿಯೇಷನ್ ನ ವಕೀಲ ಹಾಗೂ ಸಂಸ್ಥೆಯ ಅಸೋಸಿಯೇಟ್ ಪ್ರೆಸಿಡೆಂಟ್ ಶ್ರೀ ರಾಜಕುಮಾರ ಮಕ್ಕಾದ, ಚಂಡಿಗರ್ ಇವರ ವಿನಂತಿ ಮೇರೆಗೆ ಪ್ರಕರಣವನ್ನು ಮುಂದೂಡಲಾಗಿದೆ ಎಂದು ವಿಕಲ ಚೇತನರ ಮುಖ್ಯ ಆಯುಕ್ತರು ಪ್ರಕಟಿಸಿದರು.

ಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಭಾರತೀಯ ದಿವ್ಯಾಂಗ ಸಬಲೀಕರಣ ಸಂಘದ (ಇಂಡಿಯನ್ ದಿವ್ಯಾಂಗ್ ಎಂಪವರ್ಮೆಂಟ್ ಅಸೋಸಿಯೇಷನ್ ) ಅಧ್ಯಕ್ಷ ಕೊಡಕ್ಕಲ್ ಶಿವಪ್ರಸಾದ್, ವಕೀಲ ಶ್ರೀ ರಾಜ್‌ಕುಮಾರ್ ಮಕ್ಕಡ್, ನವದೆಹಲಿಯ ಅಂಗವಿಕಲರ ಮುಖ್ಯ ಆಯುಕ್ತ ಶ್ರೀ ಗೋವಿಂದರಾಜ್ ಮತ್ತು ಕೆನರಾ ಬ್ಯಾಂಕಿನ ಪ್ರಧಾನ ಕಚೇರಿಯ ಹೆಚ್. ಆರ್. ಎಮ್ ಇಲಾಖೆಯ ಗೆಝೆಟೆಡ್ ಅಧಿಕಾರಿಗಳು ಮುಂತಾದವರು ಭಾಗವಹಿಸಿದ್ದನ್ನು ಚಿತ್ರದಲ್ಲಿ ಕಾಣಬಹುದು.

ವರದಿ: ಕೊಡಕ್ಕಲ್ ಶಿವಪ್ರಸಾದ್, ಶಿವಮೊಗ್ಗ.

ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ

ವಾರ್ಷಿಕ ಚಂದಾ =500/– ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

KARUNADA KANDA

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

–ಬಸವರಾಜ ಬಳಿಗಾರ, ಸಂಪಾದಕರು
9742776385




ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಹೊಳಿ ನಾಗಲಾಪೂರ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು ಶ್ರೀ ಎಲ್ ಎಮ್ ವಗ್ಗರ ಅವರೊಂದಿಗೆ ಕರುನಾಡ ಕಂದ ಪತ್ರಿಕೆ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಕ್ರಿಕೆಟ್ ಆಟಗಾರರು ಕೈಗೆ ಕಪ್ಪುಪಟ್ಟಿ ಕಟ್ಟಿ ಆಡುತ್ತಿರುವುದಕ್ಕೆ ಕಾರಣ ಏನು ?



**ಬಳ್ಳಾರಿ / ಕಂಪ್ಲಿ :** ಪಹಲ್ಗಾಮ್ ಭಯೋತ್ಪಾದಕ ಕೃತ್ಯ ಖಂಡಿಸಿ ನಗರದ 17 ಮತ್ತು 18ನೇ ವಾರ್ಡಿನ ಯುವ ಕ್ರಿಕೆಟ್ ಆಟಗಾರರು ಕಪ್ಪು ಬಟ್ಟೆ ಧರಿಸಿ ಕ್ರಿಕೆಟ್ ಆಡಿ ಗಮನಸೆಳೆದರು.

ಹೌದು ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ಖಂಡಿಸಿ, ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ, ಇದೇ ವೇಳೆ ದಾಳಿಯಲ್ಲಿ ಮೃತರಾದವರಿಗೆ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ನಗರದ ಪ್ರಥಮ ದರ್ಜೆ ಕಾಲೇಜು (ಡಿಗ್ರಿ) ಮೈದಾನದಲ್ಲಿ 17 ಮತ್ತು 18 ವಾರ್ಡಿನ ಯುವಕರ ತಂಡ ಪ್ರೀಮಿಯರ್ ಲೀಗ್ 8 ಓವರ್ ನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆರ್.ಸಿ.ಬಿ,ಬಾಂಬೆ ಬ್ಲಾಸ್ಟರ್ಸ್, ದಿ ಕಿಂಗ್ಸ್, ಲಯನ್ಸ್ ಬರ್ಡ್, ಭಗತ್ ಸಿಂಗ್, ರಾಜಾ ಹುಲಿ ಬಾಯ್ಸ್, ಎ ಟೀಮ್ ,ಸ್ವಾಡ್ ಹಂಟರ್ಸ್ ಸೇರಿದಂತೆ ಒಟ್ಟು ಎಂಟು ತಂಡಗಳು




ಭಾಗವಹಿಸಿದ್ದಾರೆ.

ಈ ಸಂದರ್ಭದಲ್ಲಿ ಆಟಗಾರ ಹೆಚ್. ನಿಸಾರ್ ಮಾತನಾಡಿ ಈ ದಾಳಿಯು ಮಾವೀಯತೆಯ ಮೇಲಿನ ದಾಳಿಯಾಗಿದ್ದು ಭಾರತದಲ್ಲಿರುವ ನಾವು ಹಿಂದೂ ಮುಸ್ಲಿಂ ಭಾಯಿ – ಭಾಯಿ ಎಂದು ವಿವಿಧತೆಯಲ್ಲಿ ಏಕತೆಯಿಂದ ಬದುಕುತ್ತಿದ್ದು, ಶಾಂತಿ ಕದಡುವ ಹುನ್ನಾರವನ್ನು ನಡೆಸುತ್ತಿರುವ ಕೆಲವು ಕ್ಷುದ್ರಶಕ್ತಿಗಳನ್ನು ಕೇಂದ್ರ ಸರ್ಕಾರ ಕೂಡಲೇ ಸದೆ ಬಡಿಯುವ ಕೆಲಸವನ್ನು ಮಾಡಬೇಕು ಎಂದು ತಿಳಿಸಿದರು.

ಅಮಾಯಕ ಜನರ ಸಾವಿಗೆ ಕಾರಣರಾದ ಉಗ್ರ–ರಿಗೆ ಹಾಗೂ ಕೃತ್ಯ ನಡೆಸಲು ಸಹಕರಿಸಿದವರಿಗೆ ತಕ್ಕ ಶಿಕ್ಷೆ ನೀಡಬೇಕು ಎಂದು ಎಲ್ಲಾ ಆಟಗಾರರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಹಮ್ಮದ ಕೈಫ್, ಮುಕ್ತಿಯರ ಬಾಗ್ಲಿ , ವೆಂಕಟೇಶ, ಶ್ರೀಕಾಂತ, ಚಂದ್ರು, ಶಕೀಲ್, ಕೆ. ಎಸ್. ಮೆಹಬೂಬ, ಚಾಂದಭಾಷಾ, ಎಂ. ಡಿ ಸಾಧಿಕ, ಎನ್. ಯುಸೂಫ್, ವಹೀದ್, ತಿರುಮಲ, ವಿಶ್ವ, ಮಣಿ, ಮುಸ್ತಾಫ, ಶಫೀರ್, ನವಾಜ್, ಇಸ್ಮಾಯಿಲ್, ಫಾರುಕ್, ವಾಸಿಮ್, ಸೊಹೆಲ್, ಆರಿಫ್, ರಿಯಾಜ್ ಭಾಷಾ ಸೇರಿದಂತೆ ಆಟಗಾರರು ಹಾಗೂ ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

# ವಕ್ಫ್ ಕಾಯ್ದೆ ವಿರುದ್ಧ ಬೃಹತ್ ರ್ಯಾಲಿ ಮೂಲಕ ಪ್ರತಿಭಟನೆ

## ತೇರದಾಳ ಮತ ಕ್ಷೇತ್ರದಾದ್ಯಂತ ಹರಿದು ಬಂದ ಜನಸಾಗರ : ಉಲೆಮಾ ಒಕ್ಕೂಟ ಹಾಗೂ ಅಂಜುಮನ್ ಸಂಸ್ಥೆಗಳ ನೇತೃತ್ವ




**ಬಾಗಲಕೋಟೆ / ರಬಕವಿ– ಬನಹಟ್ಟಿ :** ಕೇಂದ್ರ ಸರಕಾರದ ವಕ್ಫ್ ತಿದ್ದುಪಡಿ ಕಾಯ್ದೆಯ ವಿರುದ್ಧ ಜಮೀಯತ್ ಉಲೆಮಾ ಹಿಂದ್ ಹಾಗೂ ಅಂಜುಮನ್ ಸಂಸ್ಥೆಗಳ ಒಕ್ಕೂಟ ನೇತೃತ್ವದಲ್ಲಿ ತೇರದಾಳ ಮತಕ್ಷೇತ್ರದ ರಬಕವಿ ಬನಹಟ್ಟಿ ನಗರಗಳಲ್ಲಿ ಬೃಹತ್ ಪ್ರತಿಭಟನಾ ರ್ಯಾಲಿ ನಡೆಯಿತು.

ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಮಾರ್ಗದರ್ಶನದಲ್ಲಿ ನಡೆದ ಈ ಬೃಹತ್ ರ್‍ಯಾಲಿಗೆ ತೇರದಾಳ ಮತಕ್ಷೇತ್ರದ ಮಹಾಲಿಂಗಾಪುರ, ತೇರದಾಳ, ಹನಗಂಡಿ, ರಬಕವಿ ಬನಹಟ್ಟಿ , ರಾಂಪುರ, ಹೊಸೂರ ನಗರಗಳ ಸುತ್ತಮುತ್ತಲಿನ ಮೂಲೆ ಮೂಲೆಗಳಿಂದ ಜನಸಾಗರವೇ ಹರಿದು ಬಂದಿತು ಮತಕ್ಷೇತ್ರದಾದ್ಯಂತ ಸಾವಿರಾರು ಮಂದಿ ಭಾಗವಹಿಸಿದ್ದರು. ಮತಕ್ಷೇತ್ರದ ಬಹುತೇಕ ಮುಸ್ಲಿಮ್ ಸಂಘಟನೆಗಳ ಮುಖಂಡರುಗಳು, ಇಷ್ಟು ದೊಡ್ಡ ಪ್ರಮಾಣದಲ್ಲಿ ಸೇರಿದ್ದು ಇದೇ ಮೊದಲನೆಯದಾಗಿತ್ತು .

ಮಹಾಲಿಂಗಾಪುರ, ತೇರದಾಳ ಸುತ್ತಮುತ್ತಲಿನ ಜನ ಬೈಕ್ ರ್ಯಾಲಿ ಮೂಲಕ ಬನಹಟ್ಟಿ ನಗರಕ್ಕೆ ತಲುಪಿದ್ದರು ರ್ಯಾಲಿಯು ನಗರದ ಸ್ಪಿನ್ನಿಂಗ್ ಮಿಲ್ ನಿಂದ ಆರಂಭವಾಗಿ ವೈಭವ ಚಿತ್ರಮಂದಿರ, ಮಹಾತ್ಮಾ ಗಾಂಧಿ ವೃತ್ತ , ಬಸ್ ನಿಲ್ದಾಣ , ಪೊಲೀಸ್ ಠಾಣೆ ಮೂಲಕ ತಾಲೂಕ ತಹಶೀಲ್ದಾರ್ ಕಚೇರಿಯಲ್ಲಿ ಮುಕ್ತಾಯಗೊಂಡಿತು.

ಜಮಖಂಡಿ – ಕುಡಚಿ ರಾಜ್ಯ ಹೆದ್ದಾರಿಯಲ್ಲಿ ವಾಹನಗಳ ಹಾಗೂ ಜನಸಂದಣಿ ಕಂಡು ಬಂತು. ಎಲ್ಲೆಡೆ ಆಝಾದಿ ಘೋಷಣೆ ಮೊಳಗಿತು. ಮುಂಜಾನೆ 10.30 ಗಂಟೆಗೆ ಆರಂಭವಾದ ರ್ಯಾಲಿಯು ತಾಲೂಕ ತಹಶೀಲ್ದಾರ್ ಕಚೇರಿಗೆ 12:30 ಗಂಟೆಗೆ ತಲುಪಿ ತಹಶೀಲ್ದಾರ್ ಅವರಿಗೆ ಮನವಿಯನ್ನು ಅರ್ಪಿಸಿದರು. ಪ್ರತಿಭಟನಾಕಾರರು ವಕ್ಫ್ ಕಾಯ್ದೆ ತಿದ್ದುಪಡಿ ವಿರೋಧಿಸಿ ವಿವಿಧ ರೀತಿಯ ಭಿತ್ತಿ ಪತ್ರಗಳನ್ನು ಪ್ರದರ್ಶಿಸಿದರು. ಈ ಕಾಯ್ದೆ ಸಾಂವಿಧಾನಿಕ ಆಕ್ರಮಣ', 'ನ್ಯಾಯಕ್ಕಾಗಿ ಹೋರಾಟ, ವಕ್ಫ್ ಆಸ್ತಿ ಕಾಪಾಡೋಣ', 'ಸೇವ್ ವಕ್ಫ್ , ಸೇವ್ ಕಾನ್‌ಸ್ಟಿಟ್ಯೂಶನ್'', ಈ ಕಾಯ್ದೆ ಹಿಂಪಡೆಯಿರಿ', 'ನಮ್ಮ ಹಕ್ಕುಗಳು, ನಮ್ಮ ಧ್ವನಿ ಯಾವುದೇ ರಾಜಿ ಇಲ್ಲ' ಮೊದಲಾದ ಘೋಷಣೆಗಳಿಂದ ಕೂಡಿದ ಭಿತ್ತಿ ಪತ್ರಗಳ ಮೂಲಕ ಭಾರಿ ಆಕ್ರೋಶ ವ್ಯಕ್ತಪಡಿಸಿದರು.

**ವರದಿ ಮಹಿಬೂಬ ಬಾರಿಗಡ್ಡಿ**

# ಜಿಲ್ಲಾಧಿಕಾರಿ ಹಾಡಿಗೆ ಮನಸೋತ ಜನ



**ಬೆಳಗಾವಿ :** ಡಾ.ರಾಜಕುಮಾರ್ ಅವರ ಅಭಿನಯದ ಶ್ರಾವಣ ಬಂತು ಚಲನಚಿತ್ರದ ಇದೇ ರಾಗದಲ್ಲಿ. ಇದೇ ತಾಳದಲ್ಲಿ.. ರಾಧೆಗಾಗಿ ಹಾಡಿದ ನೀಲಮೇಘ ಶಾಮ... ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಹಾಡಿದ ಹಾಡಿಗೆ ನೆರೆದ ಜನರು ಚಪ್ಪಾಳೆ ತಟ್ಟಿ ಸಂತಸದಿಂದ ಕುಣಿದಾಡಿದರು. ಜಿಲ್ಲಾ ಆಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ವಾರ್ತಾ ಭವನದಲ್ಲಿ ಇತ್ತೀಚಿಗೆ ಡಾ. ರಾಜಕುಮಾರ್ ಅವರ 97 ನೇ ಜನ್ಮದಿನಾಚರಣೆ ಪ್ರಯುಕ್ತ ಡಾ. ರಾಜಕುಮಾರ್ ಗೀತ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

**ವರದಿ : ಮಂಜು .ಎಮ್. ಚಿಕ್ಕಣ್ಣವರ**




## ಬೈಲಹೊಂಗಲದಲ್ಲಿ ಕರುನಾಡ ಕಂದ

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಜಿಲ್ಲಾ ಪಂಚಾಯತ ಬೆಳಗಾವಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಲಾಖೆ ಉಪ–ವಿಭಾಗ ಬೈಲಹೊಂಗಲ ಶ್ರೀ ಮಹೇಶ್ ಆಯ್. ಹೂಲಿ ಅವರು ಕರುನಾಡ ಕಂದ ಪತ್ರಿಕೆ ಓದುತ್ತಿರುವ ಸಂದರ್ಭದಲ್ಲಿ.

ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಪರೋಪಕಾರಿ ,ಸ್ನೇಹಜೀವಿ, ಯುವಕರ ನೆಚ್ಚಿನ ನಾಯಕ ಶ್ರೀ ಸುನೀಲ್ ವರ್ಣೇಕರ







ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ದೊಡವಾಡ ಗ್ರಾಮದ ನಿವಾಸಿಯಾದ ಶ್ರೀ ಸುನೀಲ್ ವರ್ಣೇಕರ ಯಶಸ್ವಿ ಉದ್ಯಮಿ, ಸಮಾಜ ಸೇವಕರು ಹಾಗೂ ಬೆಳಗಾವಿ ಜಿಲ್ಲೆಯ ಯುವ ಜನತಾದಳ ಜಿಲ್ಲಾ ಅಧ್ಯಕ್ಷರಾದ ಇವರು ಹಳ್ಳಿ ಹಳ್ಳಿಗಳಿಂದ ಸಮಸ್ಯೆ ಹೇಳಿಕೊಂಡು ಬರುವ ಜನರಿಗೆ ಉದಾರ ಮನಸುಳ್ಳ ದೇವತಾ ಮನುಷ್ಯರಾಗಿದ್ದಾರೆ. ಅವರಿವರೆನ್ನದೇ ಯಾರಾದರೂ ಸಮಸ್ಯೆ ಎಂದು ಬಂದರೆ ಬರಿಗೈಯಲ್ಲಿ ಕಳಿಸದೆ ತಮ್ಮ ಕೈಲಾದ ಸಹಾಯ ಮಾಡುತ್ತಾ ಗ್ರಾಮೀಣ ಭಾಗದ ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ ಯುವಕರ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ದೇವಸ್ಥಾನಗಳ ಜಾತ್ರೆ ಹಾಗೂ ಉತ್ಸವಗಳಿಗೆ ತುಂಬಾನೇ ಸಹಾಯ ಮಾಡುತ್ತಾ ಜಾತ್ರೆಗಳಲ್ಲಿ ಹಲವಾರು ಮಹಾಪ್ರಸಾದ ಕಾರ್ಯಕ್ರಮಗಳನ್ನು ಸಹ ಇವರ ಕೈಯಿಂದ ನೆರವೇರಿಸಿ ಕೊಟ್ಟಿದ್ದಾರೆ.

ಸಮಾಜದಲ್ಲಿ ಅವರಿವರನ್ನದೆ ಎಲ್ಲಾ ಜನರ ಜೊತೆಗೆ ಒಂದೇ ತಾಯಿಯ ಮಕ್ಕಳ ಹಾಗೆ ನಡೆದುಕೊಳ್ಳುವ ಇವರ ಪರೋಪಕಾರ, ಪ್ರೀತಿ, ವಾತ್ಸಲ್ಯ ನೋಡಿ ಬೈಲಹೊಂಗಲ ಮತಕ್ಷೇತ್ರದ ಜನರು ಹಾಗೂ ಯುವಕರು ಮುಂಬರುವ ದಿನಮಾನಗಳಲ್ಲಿ ಇಂತಹ ಅಭ್ಯರ್ಥಿಗಳೇ ನಮ್ಮ ಬೈಲಹೊಂಗಲ ಮತ ಕ್ಷೇತ್ರದ ಶಾಸಕರಾಗಲೆಂದು ಶುಭ ಹಾರೈಸುತ್ತಿದ್ದಾರೆ.

– ಕರುನಾಡ ಕಂದ

# ಶ್ರೀ ಆಂಜನೇಯ ಸ್ವಾಮಿಯ ನೂತನ ದೇವಸ್ಥಾನದ ಗೋಪುರ ಕಳಸಾರೋಹಣ ಕಾರ್ಯಕ್ರಮ



ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕು ಕನ್ನನಾಯಕನಕಟ್ಟೆ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿಯ ನೂತನ ದೇವಸ್ಥಾನದ ಗೋಪುರ ಕಳಸಾರೋಹಣ ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯವನ್ನು ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾದೀಶ್ವರ ಶ್ರೀ ತರಳಬಾಳು ಜಗದ್ಗುರು ಶ್ರೀ ಶ್ರೀ 1108 ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಬೃಹನ್ಮಠ ಸಿರಿಗೇರಿ, ಯೋಗ ಸಿಂಹಾಸನದೀಶ್ವರ ಶ್ರೀ ಶ್ರೀ ಶ್ರೀ ವಚನಾನಂದ ಮಹಾಸ್ವಾಮಿಗಳು ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ ಸುಕ್ಷೇತ್ರ ಹರಿಹರ ಮತ್ತು ಅಧ್ಯಕ್ಷತೆ ಮಾನ್ಯ ಶ್ರೀ ಕೆ. ನೇಮಿರಾಜ್ ನಾಯಕ್ ಜನಪ್ರಿಯ ಶಾಸಕರು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ, ಸಮಾರಂಭದ ಅಧ್ಯಕ್ಷರು ಡಾ॥ ಬಿ ಸಿ ಮೂಗಪ್ಪ, ಮುಖ್ಯ ಅತಿಥಿಗಳು ಮಾನ್ಯ ಶ್ರೀ ತುಕಾರಾಂ ಲೋಕಸಭಾ ಸದಸ್ಯರು ಬಳ್ಳಾರಿ, ಮಾನ್ಯ ಶ್ರೀಮತಿ ಎಂ. ಪಿ. ಲತಾ ಮಲ್ಲಿಕಾರ್ಜುನ್ ಶಾಸಕರು ಹರಪನಹಳ್ಳಿ ಕ್ಷೇತ್ರ, ಎನ್. ಟಿ. ಶ್ರೀನಿವಾಸ್ ಶಾಸಕರು ಕೂಡ್ಲಿಗಿ ಕ್ಷೇತ್ರ, ಮಾನ್ಯ ಶ್ರೀ ಎಚ್. ಆರ್. ಗವಿಯಪ್ಪ ಶಾಸಕರು ವಿಜಯನಗರ ಕ್ಷೇತ್ರ ಹೊಸಪೇಟೆ,ಮಾನ್ಯ ಶ್ರೀ ಎಲ್. ಭೀಮಾನಾಯಕ್ ಮಾಜಿ ಶಾಸಕರು ಹಾಗೂ ಅಧ್ಯಕ್ಷರು ಕೆ.ಎಂ.ಎಫ್ ಬೆಂಗಳೂರು, ಎಂ. ಎಸ್. ದಿವಾಕರ್ ಜಿಲ್ಲಾಧಿಕಾ–ರಿಗಳು ವಿಜಯನಗರ ಜಿಲ್ಲೆ, ವಿಶೇಷ ಆಹ್ವಾನಿತರು– ಬಿ ಕೊಟ್ರೇಶಪ್ಪ ನಾಗರಕಟ್ಟೆ ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷರು ಕೊಟ್ಟೂರು, ಶ್ರೀ ಎಸ್ ರಾಜೇಂದ್ರ ಪ್ರಸಾದ್ ನಿರ್ದೇಶಕರು ಕರ್ನಾಟಕ ಬೀಜ ನಿಗಮ ಬೆಂಗಳೂರು, ಶ್ರೀ ಎಮ್ ಎಂ ಜೆ ಹರ್ಷವರ್ಧನ್ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರು ಶ್ರೀ ಪಿ ಚನ್ನಬಸವನಗೌಡರು ಮಾಜಿ ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರು ಬಳ್ಳಾರಿ, ಶ್ರೀಪಿ.ಎಚ್. ದೊಡ್ಡ ರಾಮಣ್ಣ ಮಾಜಿ ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರು ಬಳ್ಳಾರಿ, ಶ್ರೀಮತಿ ಉಮಾದೇವಿ ಪಿ ಎಚ್ ಕೊಟ್ರೇಶ್ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು, ಬಿಜೆಪಿ ಚೀರಿಬಿ ಜಿಲ್ಲಾ ಪಂಚಾಯತಿ ಮಹಾಶಕ್ತಿ ಕೇಂದ್ರ ಅಧ್ಯಕ್ಷರು ಬಿಜೆಪಿ ಪಿ ನಾಗರಾಜ ಚಿರಿಬಿ, ಸಿವಿಲ್ ಗುತ್ತಿಗೆದಾರರು ಎನ್. ಹೇಮಣ್ಣ ಅಲಬೂರು, ವಿ. ಎಸ್. ಎಸ್. ಎನ್. ಡೈರೆಕ್ಟರ್ ಕೆ. ಅಯ್ಯನಹಳ್ಳಿ ಕೆ. ಪಿ. ಸಿದ್ದರಾಮನಗೌಡ, ಚಿರಿಬಿ ಮಹಾಶಕ್ತಿ ಕೇಂದ್ರ ಜಿಲ್ಲಾ ಪಂಚಾಯತಿ ಕಾರ್ಯದರ್ಶಿ ಎನ್ ಸುರೇಶ್, ಕೆ. ಪಿ. ರವೀಂದ್ರಗೌಡ, ಪಾಟೀಲ್ ಕೊಟ್ರಗೌಡ, ಕಾರ್ಯಕ್ರಮದ ರೂವಾರಿಗಳಾದ ಬಣಕಾರ ರೇವಣಸಿದ್ದಪ್ಪ, ಕೆ. ಪಿ. ಕುಬೇರಗೌಡ, ಎ. ಚಂದ್ರಪ್ಪ, ಕೆ. ಪಿ. ಹಾಲನಗೌಡ , ಗುತ್ತಿಗೆದಾರರು ಪಾಟೀಲ್ ವಿಜಯಕುಮಾರ್ ಹಾಗೂ ಊರಿನ ಸಮಸ್ತ ಜನಸ್ತೋಮ ಅಕ್ಕ ಪಕ್ಕದ ಊರಿನ ಜನರು, ಹಿರಿಯರು, ಮುಖಂಡರು ಸೇರುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿದರು.


ವರದಿಗಾರರು : ಎನ್. ಚಂದ್ರಗೌಡ



ಕೊಪ್ಪಳದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಗಣಪತಿ ಕೆ. ಲಮಾಣಿ, ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ವಿಠೋಬ .ಎಸ್, ಭೂಗೋಳಶಾಸ್ತ್ರ ಮುಖ್ಯಸ್ಥರಾದ ಡಾ. ಅಶೋಕ ಕುಮಾರ್, ಇತಿಹಾಸ ವಿಭಾಗದ ಮುಖ್ಯಸ್ಥೆ ಶ್ರೀಮತಿ ನಾಗರತ್ನ ತಮ್ಮಿನಾಳ, ಆಂಗ್ಲ ಭಾಷಾ ಉಪನ್ಯಾಸಕರಾದ ಶಿ.ಕಾ. ಬಡಿಗೇರ, ಮತ್ತು ಕನ್ನಡ ವಿಷಯದ ಉಪನ್ಯಾಸಕರಾದ ಶಿವಪ್ರಸಾದ್ ಹಾದಿಮನಿ ಅವರ ಕೈಯಲ್ಲಿ" ಕರುನಾಡ ಕಂದ." ಪತ್ರಿಕೆ

# ಕೊಪ್ಪಳದಲ್ಲಿ ಕರುನಾಡ ಕಂದ...

ಕೊಪ್ಪಳದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ಎಚ್. ನಾಯ್ಕ, ರಾಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಉಮೇಶ ಅಂಗಡಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಗಾಯತ್ರಿ ಭಾವಿಕಟ್ಟಿ, ಉಪನ್ಯಾಸಕರಾದ ಡಾ. ತುಕಾರಾಮ ನಾಯಕ್, ಡಾ. ಮಹಾಂತೇಶ ನೆಲಾಗಣಿ, ಶಿವಪ್ರಸಾದ್ ಹಾದಿಮನಿ, ಶಂಕರಾನಂದ ಹಾಗೂ ರಾಘವೇಂದ್ರ .ಎನ್. ಅವರ ಕೈಯಲ್ಲಿ "ಕರುನಾಡ ಕಂದ " ಪತ್ರಿಕೆ.



ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01–05–2025 ಪುಟಗಳು:16

# ಪ್ರತಿಭಾ ಪುರಸ್ಕಾರ ಹಾಗೂ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮ







**ಬಳ್ಳಾರಿ / ಕಂಪ್ಲಿ :** ಪಟ್ಟಣದ ಸಂಗಾತ್ರಯ ಸಂಸ್ಕೃತ ಪಾಠಶಾಲೆಯಲ್ಲಿ ಪುರಸಭಾ ಸದಸ್ಯ ಶಾಸಕ ಜೆ. ಎನ್. ಗಣೇಶ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಸೇರ್ಪಡೆ ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರ ದ್ವಿತೀಯ ಪಿಯುಸಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗಿತು.

ಎ. ಪಿ. ಎಂ. ಸಿ ಅಧ್ಯಕ್ಷ ಹಬೀಬ್ ರೆಹಮಾನ್ ಪ್ರಾಸ್ತಾವಿಕವಾಗಿ ಮಾತನಾಡಿದ ಸಾಮಾನ್ಯ ಕಾರ್ಯಕರ್ತ–ರಿಗೂ ಕಂಪ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಉನ್ನತ ಮಟ್ಟದ ಸ್ಥಾನ ದೊರಕಿದೆ. ಕಾಂಗ್ರೆಸ್ ಪಕ್ಷವು ಬಡವರ, ದೀನ ದಲಿತರ ಪರವಾಗಿದೆ ಹಾಗೂ ವಿದ್ಯಾರ್ಥಿಗಳಿಗೆ ಶಾಸಕರು ಹೆಚ್ಚಿನ ಅನುದಾನವನ್ನು ತಂದಿದ್ದು ಕಂಪ್ಲಿ ವಿಧಾನಸಭಾ ಕ್ಷೇತ್ರವನ್ನು ಮಾದರಿ ಶೈಕ್ಷಣಿಕ ಕ್ಷೇತ್ರವನ್ನಾಗಿ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಜೆ. ಎನ್. ಗಣೇಶ ಮಾತನಾಡಿ ಬಾಲ್ಯ ವಿವಾಹ ಮಾಡದೆ, ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ, ಭವಿಷ್ಯ ರೂಪಿಸಬೇಕು, ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಭವಿಷ್ಯ ಅಡಗಿದ್ದು, ಅದರಂತೆ ಮಕ್ಕಳು ಶಿಕ್ಷಣದ ಮೌಲ್ಯಗಳೊಂದಿಗೆ ನಾಡಿನ ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮಬೇಕು ಕಂಪ್ಲಿ ಮತ್ತು ಕುರುಗೋಡಿನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದು, ಶಿಕ್ಷಣ ಕ್ಷೇತ್ರಕ್ಕೆ 400 ಕೋಟಿ ರೂಪಾಯಿಯಷ್ಟು ಅನುದಾನ ತಂದಿದ್ದೇನೆ, ಹಂಪಾದೇವನಹಳ್ಳಿ ಹತ್ತಿರ ಎಸ್. ಸಿ, ಎಸ್, ಟಿ. ಹಾಸ್ಟೆಲ್ ಮಂಜೂರಾಗಿದೆ, ಉಪ್ಪಾರಹಳ್ಳಿ ಗ್ರಾಮದ ಹತ್ತಿರ ಕೌಶಲ್ಯಾಭಿವೃದ್ಧಿ ಕಾಲೇಜು ಮಂಜೂರಾಗಿದ್ದು, ಅಲ್ಪಸಂಖ್ಯಾತರ ಮೊರಾರ್ಜಿ ಹಾಸ್ಟೆಲ್ ನೂತನ ಕಟ್ಟಡ, ಪ್ರಥ–ಮ ದರ್ಜೆ ಕಾಲೇಜಿಗೆ ನವೀಕರಣಗೊಂಡ ಉನ್ನತ ಮಟ್ಟದ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ.

ಇದೇ ವರ್ಷ ಇದೇ ಶೈಕ್ಷಣಿಕ ವರ್ಷದಿಂದ ಬಿಎ. , ಬಿಕಾಂ. , ಬಿಎಸ್ ಸಿ ಯ ವಿವಿಧ ವಿಷಯಗಳ ಕೋರ್ಸ್ ಗಳನ್ನು ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಮಟ್ಟದಲ್ಲಿ ಶಿಕ್ಷಣಕ್ಕೆ ಒತ್ತು ನೀಡಲಾಗುವುದು ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಚುನಾವಣೆಯಲ್ಲಿ ಭರವಸೆ ನೀಡಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಜನರ ಸಂಕಷ್ಟಕ್ಕೆ ನೆರವಾಗಿದ್ದೇವೆ. ಕಂಪ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿಯ ಪರ್ವ ಶುರುವಾಗಿದೆ ಎಂದು ತಿಳಿಸಿದರು. ಕುಮಾರಿ ಸಾಯಿ ನಿಧಿಯ ಭರತನಾಟ್ಯ ಕಾರ್ಯಕ್ರಮ ಎಲ್ಲರ ಮನಸೂರೆಗೊಂಡಿತು.

ನಂತರ ಮಾತನಾಡಿ ಈ ಕಾರ್ಯಕ್ರಮದ ರೂವಾರಿ ಪುರಸಭಾ ಸದಸ್ಯ ಸಿ. ಆರ್. ಹನುಮಂತ ಮಾತನಾಡಿ ಮುಂಬರುವ ದಿನಗಳಲ್ಲಿ ಕಂಪ್ಲಿ ವಿಧಾನಸಭಾ ಕ್ಷೇತ್ರವನ್ನು ರಾಜ್ಯದಲ್ಲಿಯೇ ನಂಬರ್ ಒನ್ ಕ್ಷೇತ್ರವನ್ನಾಗಿ ಮಾಡಲಾಗುವುದು ಹಾಗೂ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಶಾಸಕರ ನಾಯಕತ್ವದಲ್ಲಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಹಾಗೂ ಕ್ಷೇತ್ರದ ವಿದ್ಯಾರ್ಥಿಗಳಿಗೆ ಶಾಸಕರು ಹೆಚ್ಚಿನ ಅನುದಾನವನ್ನು ನೀಡುತ್ತಿದ್ದಾರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ತರಲಾಗುತ್ತದೆ ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ಕಂಪ್ಲಿ ವಿಧಾನಸಭಾ ಕ್ಷೇತ್ರದ ದ್ವಿತೀಯ ಪಿಯುಸಿಯಲ್ಲಿ ಹೆಚ್ಚಿನ ಅಂಕ ಗಳಿಸಿದ ನಾನಾ ಕಾಲೇಜಿನ 60 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ನಂತರ ಜರುಗಿದ ಕಾಂಗ್ರೆಸ್ ಪಕ್ಷದ ಸೇರ್ಪಡೆಯಲ್ಲಿ ಕಂಪ್ಲಿ, ಕುರುಗೋಡು, ರಾಮಸಾಗರ, ಬೆಳಗೋಡಹಾಳ್, ಸಣಾಪುರ, ಜವುಕು, ಸುಗ್ಗೇನಹಳ್ಳಿ, ಮಾವಿನಹಳ್ಳಿ, ವದ್ದಟ್ಟಿ, ಬಾದನಹಟ್ಟಿ, ಸಿದ್ದಮ್ಮನಹಳ್ಳಿ, ಎಮ್ಮಿಗನೂರು, ಹಂಪಾದೇವನಹಳ್ಳಿ, ಗುತ್ತಿಗನೂರು ಸೇರಿದಂತೆ ನಾನಾ ಗ್ರಾಮಗಳ ವಿವಿಧ ಪಕ್ಷಗಳನ್ನು ತೊರೆದು ನೂರಾರು ಮುಖಂಡರು ಹಾಗೂ ಕಾರ್ಯಕರ್ತರು ಶಾಸಕರ ಅಧ್ಯಕ್ಷತೆಯಲ್ಲಿ, ಪುರಸಭಾ ಸದಸ್ಯ ಸಿ. ಆರ್. ಹನುಮಂತ ನೇತೃತ್ವದಲ್ಲಿ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ. ಶ್ರೀನಿವಾಸ ( ವಾಸಪ್ಪ ) , ಕುರುಗೋಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಬಸವರಾಜ, ಪುರಸಭೆ ಅಧ್ಯಕ್ಷ ಬಿ. ಪ್ರಸಾದ, ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಉಸ್ಮಾನ, ಕುರುಗೋಡ ಪುರಸಭಾ ಉಪಾಧ್ಯಕ್ಷ ಚೆನ್ನಪಟ್ಟಣ ಮಲ್ಲಿಕಾರ್ಜುನ, ಕಂಪ್ಲಿ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಕೆ. ರಿಯಾಜ್ ಆಹಮ್ಮದ, ಮುಖಂಡರಾದ ಓಂಕಾರಪ್ಪ, ಬಿ. ಸಿದ್ದಪ್ಪ, ಎಂ. ಗೋಪಾಲ, ಎಂ. ಸಿ. ಮಾಯಪ್ಪ, ಷಣ್ಮುಖಪ್ಪ, ರಾಮಸಾಗರ ನಾರಾಯಣಪ್ಪ, ಅಬ್ದುಲ್ ಮುನಾಫ್, ಕೆ. ಮೈಮೂದ, ಬಿ. ಜಾಫರ, ಕೆ. ವಾಹೀದ್, ವಿ. ರಘುನಾಯಕ್ ಸೇರಿದಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳು ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಒಳಗೊಂಡಂತೆ ವಿವಿಧ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಪಾಲಕರು ಹಾಜರಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

# ಧಾರ್ಮಿಕ ಕೊಂಡಿ ಅಸ್ತಂಗತ

**ಶಿವಮೊಗ್ಗ:** ನಾನು ಕೆನರಾ ಬ್ಯಾಂಕಿನ ಶಿವಮೊಗ್ಗ ಮುಖ್ಯ ಶಾಖೆಯಲ್ಲಿ ದುಡಿಯುತ್ತಿದ್ದಾಗ ಅವರು ನನ್ನ ಹತ್ತಿರ ಬಂದಿದ್ದರು. ಅವರ ತಂದೆ ಶ್ರೀ ನರಸಿಂಹಮೂರ್ತಿ ಅಯ್ಯಂಗಾರರು ವಿಶ್ವ ಹಿಂದೂ ಪರಿಷತ್ ದಕ್ಷಿಣ ಪ್ರಾಂತ ಪ್ರಮುಖರಾಗಿದ್ದರು. ಅವರ ಪ್ರೇರಣೆಯಿಂದ ಶಿವಮೊಗ್ಗದ ಪ್ರಸಿದ್ಧ ಶ್ರೀ ಕೋಟೆ ಸೀತಾರಾಮಾಂಜನೇಯ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳಿಗಾಗಿ 1995ರಲ್ಲಿ ರೂ.10000/– ದೇಣಿಗೆ ನೀಡಿ ಆ ನೆನಪಿಗಾಗಿ ನನ್ನ ಹೆಸರಿನಲ್ಲಿ ದಶಾವತಾರಗಳಲ್ಲಿ ಒಂದಾದ ಶ್ರೀ ಕೃಷ್ಣ ದೇವರ ವಿಗ್ರಹವನ್ನು ದೇವಲದ ಪ್ರಾಂಗಣದಲ್ಲಿ ಅಳವಡಿಸಲಾಗಿದ್ದು , ನನ್ನ ಹೆಸ–ರಿನಲ್ಲಿ ಶಾಶ್ವತ ಪೂಜೆ, ಅನ್ನದಾನಗಳನ್ನು ಶ್ರೀ ದೇವಳದಲ್ಲಿ ವ್ಯವಸ್ಥೆ ನೆರವೇರಿಸುವಲ್ಲಿ ಅವರು ಕಾರಣ ಭೂತರಾಗಿದ್ದರು... ದೇವರು ಅವರ ಆತ್ಮಕ್ಕೆ ಸದ್ಗತಿಯನ್ನು ಕರುಣಿಸಲಿ ಎಂದ ಆ ಬಾಲ ಹನುಮನಲ್ಲಿ ಪ್ರಾರ್ಥನೆ..



**– ಕೊಡಕ್ಕಲ್ ಶಿವಪ್ರಸಾದ್, ಶಿವಮೊಗ್ಗ**

# ಆರೋಪಿ ಬಂಧನ : 4 ಲಕ್ಷ ರೂಪಾಯಿ ಬೆಳ್ಳಿ ಹಾಗೂ ಬಂಗಾರ ವಶ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಸಿ ಪಿ ಐ ಪಿ ವಿ ವಿ ಸಾಲಿಮಠ ನೇತೃತ್ವದಲ್ಲಿ ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಬೈಲಹೊಂಗಲ ಪೊಲೀಸ್ ಠಾಣೆ ಪೊಲೀಸರು ಆರೋಪಿ ಒಬ್ಬನನ್ನು ಬಂಧಿಸಿದ್ದು ಆತನಿಂದ ಬೈಲಹೊಂಗಲ ಠಾಣಾ ವ್ಯಾಪ್ತಿಯ ಮೂರು ಮನೆ ಕಳ್ಳತನ ಪ್ರಕರಣದಲ್ಲಿ ಕಳ್ಳತನವಾಗಿದ್ದ ಸುಮಾರು 4 ಲಕ್ಷ ರೂಪಾಯಿ ಬೆಳ್ಳಿ ಹಾಗೂ ಬಂಗಾರದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

**ವರದಿ ಮಂಜು.ಎಮ್.ಚಿಕ್ಕಣ್ಣವರ**



ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಪಹಲ್ಗಾಂವ್ ಹುತಾತ್ಮರ ಕುಟುಂಬಸ್ಥರಿಗಾಗಿ ಪ್ರಾರ್ಥನೆ



**ಬಾಗಲಕೋಟೆ :** ಚಾಲುಕ್ಯರ ನಾಡು ಬಾದಾಮಿ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ಪಹಲ್ಗಾಂವ್ ದಾಳಿಗೆ ಹುತಾತ್ಮರಾದವರ ಕುಟುಂಬಸ್ಥರಿಗಾಗಿ ಕಪ್ಪು ಪಟ್ಟಿ ಧರಿಸಿ, ಆ ಕುಟುಂಬದವರಿಗೆ ದೇವರು ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಪ್ರಾಥ-ರ್ನೆ ಮಾಡಿದರು.


ಈ ಸಂದರ್ಭದಲ್ಲಿ ಧರ್ಮದ ಗುರುಗಳಾದ ಮೊಹಮ್ಮದ್ ಶಫಿ ಖಾರ್ಝಿ,
ಅಕ್ಬರಸಾಬ್ ಯಾದವಾಡ ಅಂಜುಮನ್ ಇಸ್ಲಾಮ್ ಕಮಿಟಿಯ ಅಧ್ಯಕ್ಷರು,
ಅಮೀನಸಾಬ ಸುಂಕದ ಉಪಾಧ್ಯಕ್ಷರು,
ದಾದಾಪೀರ್ ಸುಂಕದ ಕಾರ್ಯದರ್ಶಿಗಳು,
ಅಬ್ದುಲಸಾಬ ನಾಯ್ಕರ ಖಜಾಂಚಿ,
ಭಾಷಾ ಬಹಾದ್ದೂರಖಾನ್ ಅಂಜುಮನ್ ಇಸ್ಲಾಮ್ ಕಮಿಟಿ ಅಧ್ಯಕ್ಷರು ಚಿಮ್ಮನಕಟ್ಟಿ,
ಸುಲೇಮಾನ್ ತಾಸಗಾಂವ್ ಅಂಜುಮನ್ ಕಮಿಟಿ ಸದಸ್ಯರು ಕೋಲ್ಹಾರ,
ಮೋದಿನ್ ಮುಲ್ಲಾ ಅಂಜುಮನ್ ಇಸ್ಲಾಮ್ ಕಮಿಟಿ ಅಧ್ಯಕ್ಷರು ಮಾಗನೂರ,
ಮಾಬುಸಾಬ ಸುಂಕದ,
ತಾಜುದ್ದೀನ್ ಚಿಮ್ಮನಕಟ್ಟಿ,
ಹುಸೇನ್ ಭಾಷಾ ಸುಂಕದ,
ಮಕ್ತುಮ್ ಭೂಪನ್ನವರ್,
ಹಸನ ಸುಂಕದ,
ಸಲೀಮ್ ಸುಂಕದ,
ಹುಸೇನ ನಾಯ್ಕರ,
ಇರ್ಫಾನ್ ತಾಸಗಾಂವ್,
ನಜೀರ್ ಸುಂಕದ
ಟಿಪ್ಪುಸುಲ್ತಾನ ನಾಯ್ಕರ,
ಸಮೀರ್ ನರಗುಂದ,
ಸುಲೇಮಾನ ಸುಂಕದ,
ರಫೀಕ್ ಬಂದಗಿ,
ಅನ್ವರ ಸುಂಕದ,
ದಾವಲ ಸುಂಕದ ಸೇರಿದಂತೆ ಇನ್ನೂ ಮುಂತಾದವರು ಈ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

**-ವರದಿ ಅಬ್ದುಲಸಾಬ ನಾಯ್ಕರ**



## ತೆಲಂಗಾಣ ರಾಜ್ಯದಲ್ಲಿ ಕರುನಾಡ ಕಂದ

ನೆರೆಯ ತೆಲಂಗಾಣ ರಾಜ್ಯದ ಶ್ರೀ ಪಕ್ಷಿಮಾದ್ರಿ ಸಂಸ್ಥಾನ ವಿರಕ್ತಮಠ, ನೇರಡಗುಂಬ ಮಂ. ಮಾಗನೂರ (ತೆಲಂಗಾಣ) ಜಿ. ನಾರಾಯಣಪೇಟ ಪೀಠಾಧಿಪತಿಗಳಾದ ಶ್ರೀ ಮ. ನಿ. ಪ್ರ. ಪಂಚಮ ಸಿದ್ಧಲಿಂಗ ಮಹಾಸ್ವಾಮಿಗಳು "ಕರುನಾಡ ಕಂದ" ಪತ್ರಿಕೆಗೆ ಶುಭ ಕೋರಿದ ಸಂದರ್ಭ.



ಯಾದಗಿರಿ ಜಿಲ್ಲೆಯ ಗುರುಮಠಕಲ್ ಉಪ ತಹಶೀಲ್ದಾರ ಶ್ರೀ ನರಸಿಂಹಸ್ವಾಮಿಯವರು ಕರುನಾಡ ಕಂದ ಪತ್ರಿಕೆಗೆ ಶುಭ ಕೋರಿದ ಸಂದರ್ಭ.

# ಪುರಾತನ ಶಿಲೆಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ : ವೆಂಕಟೇಶ್ ಮುಧಿರಾಜ್




**ಯಾದಗಿರಿ/ ಗುರುಮತಕಲ್:** ಪಟ್ಟಣದ ಕಾಕಲವಾರ ರಸ್ತೆಯ ಪಕ್ಕದ ಬದಿಯಲ್ಲಿರುವ ಗುಡ್ಡದ ದೇವರು/ ಗ್ರಾಮ ರಕ್ಷಕ ಎಂದು ಕರೆಯಲ್ಪಡುವ ಪುರಾತನ ವಿಗ್ರಹದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಿಂದೂ ಯುವ ಘರ್ಜನೆ ಸಮಿತಿ ಗುರುಮಠಕಲ್ ಯುವಕರ ಪಡೆ ಸ್ವಚ್ಛತಾ ಕಾರ್ಯಕ್ರಮ ಕೈಗೊಂಡು ಪುರಾತನ ಶಿಲೆಗಳ ರಕ್ಷಣೆಗೆ ಮುಂದಾಗಿದ್ದಾರೆ.

ಶಿಲೆಯ ಇತಿಹಾಸದ ಕುರಿತು ಲಿಖಿತವಾಗಿ ಯಾವುದೇ ಪುರಾವೆಗಳಿಲ್ಲ.. ಒಂದು ಅಂದಾಜಿನ ಪ್ರಕಾರ ಸರಿ ಸುಮಾರು 500-600 ವರ್ಷಗಳ ಹಳೆಯದು ಇರಬಹುದು. ಗ್ರಾಮದ ಹಿರಿಯರ ಪ್ರಕಾರ ನವ ವಧುವನ್ನು ಮನೆಗೆ ಸ್ವಾಗತಿಸುವ ಮುನ್ನ ಗುಡ್ಡದ ದೇವ-ರಿಗೆ ಪೂಜೆ ಸಲ್ಲಿಸುವುದು, ಯಾವುದೇ ಭೂತ ಪ್ರೇತಗಳ ಪೀಡೆ ಆಗದಂತೆ ಹಾಗೂ ಮದುವೆ ಶುಭ ಕಾರ್ಯಗಳ ಸಂದರ್ಭದಲ್ಲಿ ನವ ವಧು ವರರ ವಸ್ತ್ರಗಳನ್ನು ದೇವರಿಗೆ ಅರ್ಪಿಸಿ, ಮದುವೆಯಲ್ಲಿ ಧರಿಸುವುದರಿಂದ ದಾಂಪತ್ಯ ಜೀವನ ಸುಖಕರವಾಗಿ ಸಾಗುವುದು ಎಂಬ ನಂಬಿಕೆ ಈಗಲೂ ಇದೆ.

ಪುರಾತನ ಶಿಲೆಯ ಸುತ್ತಮುತ್ತ ಮಾಂಸದ ಅಂಗಡಿಗಳು ಇದ್ದು, ಅವುಗಳ ತ್ಯಾಜ್ಯ ಶಿಲೆಯ ಸುತ್ತಮುತ್ತ ಹಾಕುತ್ತಿದ್ದು, ಬೇಸರ ತಂದಿದೆ ಪುರಸಭೆ ಕಾರ್ಯಾಲಯಕ್ಕೆ ಸಾಕಷ್ಟು ಬಾರಿ ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರ ವತಿಯಿಂದ ರಸ್ತೆಯುದ್ದಕ್ಕೂ ಇರುವ ಮಾಂಸದಂಗಡಿಗಳ ತೆರವಿಗೆ ಸಾಕಷ್ಟು ಬಾರಿ ಮನವಿ ಕೊಟ್ಟಿದ್ದರೂ ಸಹ ಇನ್ನೂ ಮಾಂಸದ ಅಂಗಡಿಗಳ ಸ್ಥಳಾಂತರಕ್ಕೆ ಇನ್ನೂ ಪುರಸಭೆ ಅಧಿಕಾರಿಗಳು ಮುಂದಾಗದೆ ಇರುವದು ಅವರ ಬೇಜವಾಬ್ದಾರಿತನ ತೋರಿಸಿಕೊಡುತ್ತದೆ ಎಂದು ವೆಂಕಟೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸ್ವಚ್ಛತಾ ಕಾರ್ಯಕ್ರಮದಲ್ಲಿ ನರಸಪ್ಪ ಗಂಗಾನೊಳ, ಬಾಲಾಜಿ, ಸುತ್ತಮುತ್ತಲಿನ ವರ್ತಕರು, ಹಿಂದೂ ಯುವ ಘರ್ಜನೆ ಕಾರ್ಯಕರ್ತರು, ಸಾರ್ವಜನಿಕರು ಪಾಲ್ಗೊಂಡಿದ್ದರು.

**ವರದಿ: ಜಗದೀಶ್ ಕುಮಾರ್**



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಡಿವೆಪ್ಪ ತಳವಾರ ಅವರೊಂದಿಗೆ ಕರುನಾಡ ಕಂದ ಪತ್ರಿಕೆ.



ಶ್ರೀಯುತ ಶಿವರಾಜ ತಹಶೀಲ್ದಾರರು ಹಾಗೂ ತಾಲೂಕು ದಂಡಾಧಿಕಾರಿಗಳು ಕಂಪ್ಲಿ, ಶ್ರೀಯುತ ಯಣ್ಣಿ ವೆಂಕಟೇಶ ಗಣ್ಯ ವರ್ತಕರು ಹಾಗೂ ಖಜಾಂಚಿಗಳು, ಬ್ರೈಟ್ ವೇ ಆಂಗ್ಲ ಮಾಧ್ಯಮ ಹಿರಿಯ ಹಾಗೂ ಪ್ರೌಢಶಾಲೆ ಕಂಪ್ಲಿ ಇವರೊಂದಿಗೆ ಕರುನಾಡ ಕಂದ.




ಬಳ್ಳಾರಿ ಜಿಲ್ಲೆ ಕಂಪ್ಲಿಯ ಪ್ರಥಮ ದರ್ಜೆ ( ಡಿಗ್ರಿ ) ಕಾಲೇಜ್ ನ ಪ್ರಾಂಶುಪಾಲರಾದ ಡಾ. ಚಂದ್ರಶೇಖರ ವಿ. ಬಿಳೇಗುಡ್ಡ ಹಾಗೂ ಉಪನ್ಯಾಸಕರೊಂದಿಗೆ ಕರುನಾಡ ಕಂದ ಪತ್ರಿಕೆ.

ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪೊಲೀಸ್ ಉಪ ವಿಭಾಗದ ನೂತನ ಡಿ.ವೈ.ಎಸ್. ಪಿ ಡಾ. ವೀರಯ್ಯ ಹಿರೇಮಠ ಇತ್ತೀಚೆಗೆ ಅಧಿಕಾರ ಸ್ವೀಕರಿಸಿದರು. ಡಿ.ವೈ.ಎಸ್. ಪಿ. ರವಿ ನಾಯಕ ಅಧಿಕಾರ ಹಸ್ತಾಂತರಿಸಿದರು.

# ಯರಗಟ್ಟಿ ಎಸ್‌ಸಿ ಕಾಲೋನಿಯಲ್ಲಿ ಅನಾಥವಾದ ಶೌಚಾಲಯ

ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕಿನಲ್ಲಿರುವ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಪಟ್ಟ ಸಾರ್ವಜನಿಕ ಶೌಚಾಲಯ ಹಲವಾರು ವರ್ಷಗಳಿಂದ ಇದ್ದು ಐದು ತಿಂಗಳ ಹಿಂದೆ ಶೌಚಾಲಯ ಇರುವ ಆಸ್ತಿ, ಬೇರೆಯವರಿಗೆ ಸಂಬಂಧಿಸಿದ್ದು ಎಂದು ಪುರಸಭೆಯ ಮುಖ್ಯಾಧಿಕಾರಿ ಶೌಚಾಲಯ ಒಡೆದು ಹಾಕಿದ್ದು ತಪ್ಪಾಯಿತು ಎಂದು ಕೇಳಿ ಅದೇ ಜಾಗದಲ್ಲಿ ಮತ್ತೆ ಸಾರ್ವಜನಿಕರಿಗೆ ಶೌಚಾಲಯ ನಿರ್ಮಿಸಿಕೊಟ್ಟು ಮುಂಚೆ ಇದ್ದ ಸ್ಥಿತಿಗತಿಯನ್ನು ಬದಲಿಸಿ ಕಟ್ಟಿಸಿ ಸರ್ಕಾರಿ ಹಣ ವ್ಯರ್ಥ ಮಾಡಿದ್ದಾರೆ ಹಾಗೂ ನೀರಿನ ವ್ಯವಸ್ಥೆ ಸಹ ಇಲ್ಲದೆ ಶೌಚಾಲಯದ ಸ್ಥಿತಿಗತಿ ತುಂಬಾ ಹದಗೆಟ್ಟಿದ್ದು ಶೌಚಾಲಯಕ್ಕೆ ಹೋಗುವ ಹೆಣ್ಣು ಮಕ್ಕಳಿಗೆ ತುಂಬಾ ತೊಂದರೆ ಆಗುತ್ತಿದೆ ಶೌಚಾಲಯದ ಸುತ್ತಮುತ್ತ ಇರುವ ಬಿಲ್ಡಿಂಗ್ ಗಳ ಮೇಲಿಂದ ನೋಡಿದರೆ ಶೌಚಾಲಯದ ಚಾವಣಿ ಇಲ್ಲದೆ ಒಳಗಡೆಯ ಹೆಣ್ಣು ಮಕ್ಕಳು ಕಂಡು ಬರುತ್ತಾರೆ ಇದೇ ವಿಷಯವಾಗಿ ಸಮಾಜ ಕಲ್ಯಾಣ ಇಲಾಖೆ ಸವದತ್ತಿಯ ಅಧಿಕಾರಿಗಳ ಗಮನಕ್ಕೆ ತಂದರೆ "ಓಹೋ ನನ್ನ ಗಮನಕ್ಕೆ ಈ ವಿಷಯ ಬಂದೇನೇ ಇಲ್ಲ" ಎನ್ನುತ್ತಿದ್ದಾರೆ ಹೀಗಿದ್ದಾಗ ಯರಗಟ್ಟಿಗೆ ಯಾರಾದರೂ ಬರುವುದಾಗಲೀ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡೋದಕ್ಕಾಗಲಿ, ಬೇರೆ ಹಳ್ಳಿಯವರು ಹಿಂಜರಿಯುತ್ತಿದ್ದಾರೆ ಹೀಗಿದ್ದಾಗ ಹೆಣ್ಣು ಮಕ್ಕಳ ಗೋಳು ಕೇಳುವವರು ಯಾರು ಕಾದು ನೋಡಬೇಕಾಗಿದೆ...

ವರದಿ ಮಂಜು.ಎಮ್.ಚಿಕ್ಕಣ್ಣವರ






**ಯಾದಗಿರಿ : ಗುರುಮಠಕಲ್ ಹಾಗೂ ಚೆಪೆಟ್ಲಾ ಶಾಲೆಗಳಿಗೆ ಶಿಕ್ಷಕರ ಹಾಗೂ ಯಾದಗಿರಿ ವಿಭಾಗಕ್ಕೆ ಚಾಲಕ ಮತ್ತು ಮೆಕಾನಿಕ್ ನೇಮಕಾತಿ.**

**1. ಶ್ರೀ ಲಕ್ಷ್ಮೀ ವೆಂಕಟೇಶ್ವರ ಪಬ್ಲಿಕ್ ಶಾಲೆ ಗುರುಮಠಕಲ್.**
(ಆಂಗ್ಲ, ಕನ್ನಡ, ಗಣಿತ, ವಿಜ್ಞಾನ, ಹಿಂದಿ, ಶಿಶು ಮಕ್ಕಳಿಗೆ ಶಿಕ್ಷಕರು, ಯೋಗ, ಚಿತ್ರಕಲೆ ಮತ್ತು ಕೌಶಲ್ಯ ಅಭಿವೃದ್ಧಿ )
ಸಂಪರ್ಕ: 9380497949,
9449250641,
9606330210.

**2. ಫ್ರಂಟ್ ಲೈನ್ ಎಜುಕೇಶನ್ ಸೊಸೈಟಿ**
ಗುರುಮಠಕಲ್ ಇಂಗ್ಲಿಷ್ ಹಾಗೂ ಸೋಷಿಯಲ್ ಸೈನ್ಸ್ (ಕನ್ನಡ ಹಾಗೂ ಇಂಗ್ಲೀಷ್ ಮಾದ್ಯಮ) ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ 9686121275.

**3.ಶಾಂತಿ ನಿಕೇತನ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಚೆಪೆಟ್ಲಾ.**
ಇಂಗ್ಲಿಷ್, ಕನ್ನಡ, ಹಿಂದಿ, ಗಣಿತ, ಸಮಾಜ, ದೈಹಿಕ ಶಿಕ್ಷಣ
ಸಂಪರ್ಕ: 9449638931,
9900759476,
7483322702.

**4. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ. ಯಾದಗಿರಿ ವಿಭಾಗ**
ಗುತ್ತಿಗೆ ಅಧಾರದ ಮೇಲೆ ಚಾಲಕ ಹಾಗೂ ತಾಂತ್ರಿಕ ವರ್ಗ (ಮೆಕಾನಿಕ್) ನೇಮಕಾತಿ.
ಸಂಪರ್ಕ: 9845963780.


# ಊರು ಬಿಡುವ ಆಚರಣೆಯ ಗುಳೆ ಲಕ್ಕಮ್ಮ ಜಾತ್ರೆ



ವಿಜಯನಗರ ಜಿಲ್ಲೆಯ ಕೂಡ್ಲಿಗಿ ಪಟ್ಟಣದಲ್ಲಿ ಇತ್ತೀಚೆಗೆ ಗುಳೆ ಲಕ್ಕಮ್ಮ ಜಾತ್ರೆ ನಡೆಯಿತು. ಇಡೀ ಊರಿಗೆ ಊರೇ ಖಾಲಿಯಾಗುವ ಜಾತ್ರೆ ಇದು, ಗುಳೆ ಲಕ್ಕಮ್ಮ ಎಂಬ ದೇವತೆ ಊರಲ್ಲೆಲ್ಲಾ ಸುತ್ತುವ ಮುನ್ನವೇ ಇಡೀ ಊರಿನ ಜನ ತಮ್ಮ ದನ-ಕರು, ನಾಯಿ, ಕುರಿ, ಕೋಳಿ ಏನೊಂದನ್ನೂ ಬಿಡದೆ, ತಮಗೆ ಬೇಕಾಗುವ ಎಲ್ಲಾ ವಸ್ತು, ಸಲಕರಣೆಗಳೊಂದಿಗೆ ಊರು ಬಿಟ್ಟು ಊರ ಹೊರಗೆ ಬೀಡು ಬಿಡುತ್ತಾರೆ. ನಂತರ ಗುಳೆ ಲಕ್ಕಮ್ಮ ದೇವತೆಯ ಮೆರವಣಿಗೆ ಇಡೀ ಊರನ್ನು ಸುತ್ತುತ್ತದೆ. ಊರಲ್ಲಿ ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡ ನಂತರ ಕೊನೆಯಲ್ಲಿ ದೇವತೆ ಊರನ್ನು ತೊರೆದು ಊರ ಹೊರಗೆ ತಾಂಡಾದಲ್ಲಿ ನೆಲೆಸುತ್ತಾಳೆ, ಸಂಜೆ ಮತ್ತೆ ವಿಧಿ ವಿಧಾನಗಳೊಂದಿಗೆ ಮೊದಲು ದೇವತೆ ಊರನ್ನು ಪ್ರವೇಶಿಸಿದ ನಂತರ ದೇವತೆಯ ಹಿಂದೆ ಇಡೀ ಊರ ಜನ ಪಟ್ಟಣವನ್ನು ಪ್ರವೇಶಿಸುತ್ತಾರೆ. ಅಲ್ಲಿಯವರೆಗೂ ಕೂಡ್ಲಿಗಿ ಪಟ್ಟಣದಲ್ಲಿ ಒಂದೇ ಒಂದು ನರಪಿಳ್ಳೆಯೂ, ಸಾಕು ಪ್ರಾಣಿ, ಪಕ್ಷಿಗಳಿರುವುದಿಲ್ಲ, ಪೊಲೀಸ್ ಕಾವಲು ಮಾತ್ರ ಇರುತ್ತದೆ. ಇದು ಮೊದಲಿನಿಂದಲೂ 2-3 ವರ್ಷಗಳಿಗೊಮ್ಮೆ ನಡೆದು ಬಂದ ಪದ್ಧತಿಯಾಗಿದೆ. ವಿಶೇಷವೆಂದರೆ ಇಲ್ಲಿ ಯಾವುದೇ ಜಾತಿ, ಧರ್ಮಗಳ ಭೇದವಿಲ್ಲದಂತೆ ಎಲ್ಲರೂ ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ

# ಬೆಳಗಾವಿಯಲ್ಲಿ ವಾಟಾಳ್ ನಾಗರಾಜ್ ರವರನ್ನು ಬಂಧಿಸಿದ ಪೊಲೀಸರು



**ಬೆಳಗಾವಿ :** ಎಂ. ಇ. ಎಸ್ ನಿಷೇಧಿಸಬೇಕೆಂದು ಆಗ್ರಹಿಸಿ ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಅವರು ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಅವರನ್ನು ಬಂಧಿಸಿದ ಘಟನೆ ನಡೆಯಿತು.

ಬೆಳಗಾವಿ ಗಡಿ ಭಾಗದಲ್ಲಿ ಪದೇ ಪದೇ ಪುಂಡಾಟ ನಡೆಸುತ್ತಿರುವ ಎಂ. ಇ. ಎಸ್ ಸಂಘಟನೆಯನ್ನು ನಿಷೇಧ ಮಾಡಬೇಕು, ಕನ್ನಡಿಗರಿಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಮಾರ್ಕೆಟ್ ಪೊಲೀಸರು ವಾಟಾಳ ನಾಗರಾಜ ಅವರನ್ನು ಬಂಧಿಸಿದರು.

ವರದಿ : ಮಂಜು .ಎಮ್. ಚಿಕ್ಕಣ್ಣವರ

ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ 134 ನೇ ಜಯಂತೋತ್ಸವ ಹಾಗೂ ಬಾಬು ಜಗಜೀವನ್ ರಾಮ್ ರವರ 118ನೆಯ ಜಯಂತೋತ್ಸವ ಕಾರ್ಯಕ್ರಮ

ಕೂಡ್ಲಿಗಿ ತಾಲೂಕಿನ ಗೆದ್ದಲಗಟ್ಟೆ ಗ್ರಾಮದಲ್ಲಿ ಪ್ರೊ. ಬಿ ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಡಾ. ಬಿ ಆರ್ ಅಂಬೇಡ್ಕರ್ ಅವರ 134 ನೇ ಹಾಗೂ ಬಾಬು ಜಗಜೀವನ್ ರಾಮ್ ರವರ 118ನೆಯ ಜಯಂತೋತ್ಸವದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಎಸ್ ದುರುಗೇಶ್ ವಿಜಯನಗರ ಜಿಲ್ಲಾ ಸಂಚಾಲಕರು ಉದ್ಘಾಟಿಸಿ ಉಳ್ಳವರ ಪಾಲಾಗಿದ್ದ ಮತದಾನದ ಹಕ್ಕನ್ನು ಎಲ್ಲಾ ಜನಾಂಗಕ್ಕೆ ಮತ್ತು ಮಹಿಳೆಯರಿಗೆ ಮತದಾನ ಮಾಡುವ ಹಕ್ಕನ್ನು ಭಾರತ ರತ್ನ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ದೊರಕಿಸಿ ಕೊಟ್ಟರು ಎಂದು ಹೇಳಿದರು.

### ಗ್ರಾಮ ಘಟಕದ ನೂತನ ಪದಾಧಿಕಾರಿಗಳು

**ಗ್ರಾಮ ಸಂಚಾಲಕರು ಹೇಮಣ್ಣ,**
**ಉಪ ಸಂಚಾಲಕರು ಅಂಜಿನಪ್ಪ,**
**ಖಜಾಂಚಿ ವೆಂಕಟೇಶ್,**
**ಗೌರವ ಸಂಚಾಲಕರುಶಿವಣ್ಣ,**
**ಪ್ರಭಾಕರ, ಸುರೇಶ, ರವಿ**
**ಗ್ರಾಮ ಸಂಘಟನಾ ಸಂಚಾಲಕರು**
**ಮಾರುತಿ ಮಂಜುನಾಥ, ದುರ್ಗೇಶ್,**
**ರಮೇಶ್ ಪೂಜಾರಿ, ಬಸವರಾಜ್,**
**ತಿಪ್ಪೇಶ್, ರಾಜು, ನಟರಾಜ್.**

ಅಧ್ಯಕ್ಷತೆಯನ್ನು ಶ್ರೀಮತಿ ಚೆನ್ನಮ್ಮ ರಾಮಣ್ಣ ಅಧ್ಯಕ್ಷರು ಗ್ರಾಮ ಪಂಚಾಯತಿ ಜರ್ಮಲೆ( ಹರವದಿ) ಹಾಗೂ ಶ್ರೀಮತಿ ಪಾಪಕ್ಕ ಕೆ ಬಸವರಾಜ್ ಉಪಾಧ್ಯಕ್ಷರು ಗ್ರಾಮ ಪಂಚಾಯತಿ ಜರ್ಮಲೆ ( ಗೆದ್ದಲಗಟ್ಟೆ ) ವಹಿಸಿಕೊಂಡರು. ಮುಖ್ಯ ಭಾಷಣಕಾರರಾಗಿ ಮಾರನಾಯಕ ಎಂ.ಎ ಎಂ.ಇಡಿ ಕಣ್ಣುಕುಪ್ಪೆ ಜಗಳೂರು ಇವರು ಡಾಕ್ಟರ್ ಬಿ ಆರ್ ಅಂಬೇಡ್ಕರ್ ಜೀವನ ಮತ್ತು ಶಿಕ್ಷಣ ಹೋರಾಟದ ಬಗ್ಗೆ ತಿಳಿಸಿದರು. ಬಿ ಹನುಮೇಶ್ ಜಿಲ್ಲಾ ಸಂಘಟನಾ ಸಂಚಾಲಕರು ಇವರು ನೂತನ ಗ್ರಾಮ ಘಟಕದ ಪದಾಧಿಕಾ-ರಿಗಳ ಆಯ್ಕೆಯನ್ನು ಘೋಷಣೆ ಮಾಡಿ ಗ್ರಾಮದ ಸಮಸ್ಯೆಗಳಿಗೆ ಸ್ಪಂದಿಸಿ ನ್ಯಾಯ ದೊರಕಿಸಿ ಕೊಡುವಲ್ಲಿ ಶ್ರಮಿಸಬೇಕೆಂದು ಈ ಮೂಲಕ ನೂತನ ಪದಾಧಿಕಾರಿಗಳಿಗೆ ಕಿವಿ ಮಾತನ್ನು ಹೇಳಿದರು.

ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಕಾನಾಮಡುಗು ದುರುಗಪ್ಪ, ಕುಮಾರ್ ಕಾನಾಮಡುಗು ಜಿಲ್ಲಾ ಖಜಾಂಚಿ, ತಾಲೂಕು ಸಂಘಟನಾ ಸಂಚಾಲಕರಾದ ಕಾನಾಮಡಗು ಫಕೀರಪ್ಪ, ಕೂಡ್ಲಿಗಿ ಮಹೇಶ್, ಸಿ ಎಸ್ ಪುರ ಮಹೇಶ್, ಮೂಗಪ್ಪ ಕೂಡ್ಲಿಗಿ, ಐಗಳು ಮಲ್ಲಾಪುರ ಜಿತೇಂದ್ರ ಕುಮಾರ್, ಹಾಗೂ ಕೂಡ್ಲಿಗಿ ನಗರ ಸಂಚಾಲಕರಾದ ಅಜಯ್ ಕುಮಾರ್, ಗ್ರಾಮ ಪಂಚಾಯತಿ ಸದಸ್ಯರಾದ ಎನ್ ರಾಮಸ್ವಾಮಿ, ಶ್ರೀಮತಿ ಜಿ ಲಕ್ಷ್ಮಿ ಸಿದ್ದನಗೌಡ ಎಪಿಎಂಸಿ ಸದಸ್ಯರು, ಜಿ ಬಸವರಾಜ್ ಎಸ್ ಡಿ ಎಂ ಸಿ ಅಧ್ಯಕ್ಷರು, ಡಿ ಮಂಜುನಾಥ ಬಿಜೆಪಿ ಮುಖಂಡರು, ಕುಮಾರ್ ಬಿಜೆಪಿ ಮುಖಂಡರು, ಹರವದಿ ಗ್ರಾಮದ ದಲಿತ ಮುಖಂಡರಾದ ರಾಮಣ್ಣ,





ಕಂಚೋಬನಹಳ್ಳಿ ದಲಿತ ಮುಖಂಡರ ಸಣ್ಣಸಾರಪ್ಪ, ಮಾರಪ್ಪ, ಕಾನಾಮಡುಗು ದೊಡ್ಡಣ್ಣ, ಗೆದ್ದಲಗಟ್ಟೆ ಗ್ರಾಮದ ಮುಖಂಡರಾದ ನಾಗಪ್ಪ ,ಎಚ್ ಬಸಪ್ಪ, ಚಂದ್ರಪ್ಪ, ಕಾರ್ಯಕ್ರಮದ ಸ್ವಾಗತವನ್ನು ಜಿ ಮಂಜುನಾಥ ಶಿಕ್ಷಕರು ಗೆದ್ದಲಗಟ್ಟೆ, ನಿರೂಪಣೆಯನ್ನು ಟಿ ಹೆಚ್ ಎಂ ಶೇಕರಯ್ಯ ಶಿಕ್ಷಕರು ಗೆದ್ದಲಗಟ್ಟೆ ಇವರು ಮಾಡಿದರು. ಗ್ರಾಮದ ಮುಖಂಡರು ಮಹಿಳೆಯರು ಮಕ್ಕಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು ಇದೇ ಸಂದರ್ಭದಲ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಊರಿನಲ್ಲಿ ಡಿಜೆ ಸೌಂಡ್ ಸಿಸ್ಟಮ್ ಮೂಲಕ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಗುಡಕೋಟೆ ಪೊಲೀಸ್ ಠಾಣೆ ಸಿಬ್ಬಂದಿ ಬಂದೋಬಸ್ತ್ ನೀಡಿದರು.

**ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ**

# ವಿದ್ಯಾರ್ಥಿಗಳಿಗೆ ಬಾಳಿನ ಬೆಳಕಾಗಿರುವ “ಜ್ಞಾನ ಜ್ಯೋತಿ ಶಿಕ್ಷಣ ಸಂಸ್ಥೆ (ರಿ.)” : ಮರೆಪ್ಪ ಕೆಲ್ಲೂರ

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಪಟ್ಟಣದ ದತ್ತ ನಗರ ಬಡಾವಣೆಯ ಎರಡನೇ ಕ್ರಾಸ್ ಹತ್ತಿರವಿರುವ ಜ್ಞಾನ ಜ್ಯೋತಿ ಶಿಕ್ಷಣ ಸಂಸ್ಥೆಯು ತಾಲೂಕಿನಲ್ಲಿಯೇ ಅತ್ಯಂತ ಗುಣ ಮಟ್ಟದ ಶಿಕ್ಷಣವನ್ನು ಕೊಡುತ್ತಿದೆ. ವಿಶೇಷವಾಗಿ ನವೋದಯ, ಸೈನಿಕ, ಮೊರಾರ್ಜಿ ಹಾಗೂ ಇನ್ನಿತರ ವಸತಿ ಶಾಲೆಗೆ ಆಯ್ಕೆಯಾಗಲು ಪೂರ್ವ ತರಬೇತಿ ಕೊಡುತ್ತಿರುವ ಕಾರ್ಯ ಬಹು ಮುಖ್ಯವಾಗಿವೆ.

ಶಾಲೆಯು ಪ್ರಾರಂಭವಾಗಿ ಸರಿ ಸುಮಾರ ಇಪ್ಪತ್ತು ವರ್ಷಗಳಲ್ಲಿ ಹಲವಾರು ವಿದ್ಯಾರ್ಥಿಗಳು ನವೋದಯ, ಮೊರಾರ್ಜಿ ಹಾಗೂ ಸೈನಿಕ ಶಾಲೆಗೆ ತಾಲೂಕಿಗೆ ಪ್ರಥಮ ಹಾಗೂ ದ್ವಿತಿಯ ಸ್ಥಾನಕ್ಕೆ ಆಯ್ಕೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ ಅದೇ ರೀತಿಯಾಗಿ ನಮ್ಮ ಎಲ್ಲಾ ಮಕ್ಕಳು ಕೂಡಾ ಆಯ್ಕೆಯಾಗಿದ್ದು ನನಗೆ ಬಹಳ ಸಂತೋಷವಾಗಿದೆ ಎಂದು ಪಾಲಕ ಮರೆಪ್ಪ ಕೆಲ್ಲೂರ ಸಂತೋಷ ಪಟ್ಟರು.

ಅದೇ ರೀತಿಯಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹಣಮಂತ್ರಾಗೌಡ ಪಾಟೀಲ್ ರವರು ಪಾಲಕರ ಮೆಚ್ಚುಗೆ ನಮಗೆ ಇನ್ನೂ ಹೆಚ್ಚಿನ ರೀತಿಯಾಗಿ ಕಾರ್ಯಗಳನ್ನು ಪ್ರೇರಣೆ ನೀಡಲಿದೆ ಮತ್ತು ವಿಶೇಷವಾಗಿ ಮೇ ಕೊನೆಯ ವಾರ ಹಾಗೂ ಜೂನ್ ತಿಂಗಳುಗಳಲ್ಲಿ ಪ್ರವೇಶಗಳು ಪ್ರಾರಂಭವಾಗುತ್ತವೆ ಆಸಕ್ತ ಪಾಲಕ ಬಂಧುಗಳು ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ನಿಮ್ಮ ಮಕ್ಕಳ ಹೆಸರನ್ನು ನೊಂದಾಯಿಸಿಕೊಳ್ಳಿ ಎಂದು ಹೇಳಿದರು ಹಾಗೂ ಸಂಸ್ಥೆಯ ಅಡಿಯಲ್ಲಿ ಪ್ರಶಾಂತವಾದ ವಾತಾವರಣ ಇರುವ ವಿಜಯಪುರ ಕ್ರಾಸ ಹತ್ತಿರ ಎಚ್ ಡಿ ಎಫ್ ಸಿ ಬ್ಯಾಂಕ್ ಮೇಲ್ಗಡೆ ಜ್ಞಾನ ಯೋಗಿ ಶ್ರೀ ಸಿದ್ದೇಶ್ವರ




ಗ್ರಂಥಾಲಯವಿದ್ದು ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ದಾಖಲಾತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು.

**ದಾಖಲಾತಿಗಾಗಿ ಸಂಪರ್ಕಿಸಿ: 9845825243, 8722613143, 7353015143**

**ವರದಿ: ಚಂದ್ರಶೇಖರ ಪಾಟೀಲ್**

# ಕಲಿಯುಗದ ಪವಾಡ ಪುರುಷ “ಶರಣು” ಮುತ್ಯಾ

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗುಡೂರ ಎಸ್ ಎನ್ ಗ್ರಾಮದ ಪವಾಡ ಪುರಷ ಶ್ರೀ ಶರಣು ಮುತ್ಯಾ (ದಳಪತಿ) ಸಾಮಾನ್ಯ ರೈತ ಕುಟುಂಬದ ವ್ಯಕ್ತಿತ್ವ ಉಳ್ಳವರಾಗಿದ್ದು, ಒಂದು ದಿನ ಶ್ರೀ ತಿಂಥಣಿ ಮೌನಪ್ಪ ಮುತ್ಯಾರು ರಾತ್ರಿ 2 ಗಂಟೆಗೆ ಸಾಕ್ಷಾತ್ಕಾರದಿಂದ ನನ್ನ ಜೊತೆ ಮಾತನಾಡಿ ಒಂದು ವಸ್ತು ಕೊಟ್ಟು ಆಶೀರ್ವಾದ ಮಾಡಿ ಹೋಗಿರುವ ಪರಿಣಾಮ ಇಂದು ಅವರ ದೈವೀ ವಾಕ್ಯಗಳು ನನ್ನ ಮುಖೇನ ಕಾರ್ಯ ಹೇಳಿಕೆಗಳಾದ ಬೋರವೆಲ್ ನೀರು, ಬಾವಿ ನೀರು, ವಿವಿಧ ಖಾಯಿಲೆಗಳಿಗೆ ಔಷಧೋಪಾಯ ಮತ್ತು ಕುಟುಂಬ ಕಲಹಗಳ ಪರಿಹಾರವಾಗುತ್ತಿರುವುದು ಆ ಮಹಾತ್ಮರ ಮಹಿಮೆಯಿಂದ ನಂದೇನಿಲ್ಲ ಎಂದು ಹೇಳುತ್ತಾರೆ ಎನ್ನುತ್ತಾರೆ ಅಕ್ಕ ಪಕ್ಕದ ಹಳ್ಳಿಯವರು. ಹಲವಾರು ಭಕ್ತರಿಗೆ ತಮ್ಮ ಕಾರ್ಯಗಳಲ್ಲಿ ಯಶಸ್ಸು ಕಂಡಿದ್ದಕ್ಕಾಗಿ ಪ್ರತಿ ಗುರುವಾರ ಮತ್ತು ಭಾನುವಾರ ಭಕ್ತ ಸಾಗರ ಹರಿದು ಮುತ್ಯಾರ ಹತ್ತಿರ ಬರುತ್ತಿರುತ್ತಾರೆ.

ಪ್ರಸ್ತುತ ಕಲಬುರಗಿ ಜಿಲ್ಲೆಯಷ್ಟೆ ಅಲ್ಲದೆ ಕರ್ನಾಟಕದ ವಿವಿಧ ಮೂಲಗಳಿಂದ ಭಕ್ತರ ಜನಸಾಗರ ಗುರುವಾರ ಮತ್ತು ಭಾನುವಾರ ಶರಣು ಮುತ್ಯಾನ ವಾಸಸ್ಥಾನಕ್ಕೆ ಬಂದು ಕಾರ್ಯಗಳಲ್ಲಿ ಯಶಸ್ವಿಯಾಗಿದ್ದೇವೆ ಎಂದು ಭಕ್ತರು ಆನಂದಮಯ ಮಾತುಗಳನ್ನು ಹೇಳಿದರು.


**ಕುಟೀರದ ಆಪ್ತ ಸಹಾಯಕರ ಮೊ. ನಂ:**
**80885 09636, 85488 53915**

**ವರದಿ: ಚಂದ್ರಶೇಖರ ಪಾಟೀಲ್**



ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01–05–2025 ಪುಟಗಳು:16

# ದುಷ್ಟ ಜನರು ಹಾಗೂ ಅಪ್ರಾಮಾಣಿಕ ಅಧಿಕಾರಿಗಳಿಂದ ರಕ್ಷಣೆ ನೀಡಿದ ಕಾನೂನು ಅಧ್ಯಯನ





**ಕಿರಣ್.ಕೆ.ಟಿ ವಕೀಲರು**
**ಅಂಕಣ** **ನಿಮ್ಮ ಬದುಕಿಗೆ ಕಾನೂನು ಕವಚ**

ದೇಶ ಸುತ್ತಿ ನೋಡು ಕೋಶ ಬಿತ್ತಿ ನೋಡು ಎಂಬಂತೆ ಸಾಗುತ್ತಿದ್ದ ನನ್ನ ಜೀವನದಲ್ಲಿ ಎಂದೂ ಮರೆಯದಂತಹ ತನ್ನ ನೈಜ್ಯ ಕಥೆ ಹಂಚಿಕೊಂಡಿದ್ದ ಯುವತಿಯ ದುರಂತ ಕಥೆಯನ್ನು ನಾನು ನಿಮ್ಮ ಬಳಿ ಈ ಅಂಕಣದಲ್ಲಿ ಚರ್ಚಿಸುತ್ತಿದ್ದೇನೆ. ಸಮುದ್ರದ ಕಡಲನ್ನು ನೋಡುವ ಬಯಕೆಯಿಂದ ನಾನು ಮತ್ತು ನನ್ನ ಮಡದಿ ಹೊರ ರಾಜ್ಯದ ಕಡಲ ತೀರಕ್ಕೆ ಹೋಗಿದ್ದೆವು, ಸೂರ್ಯಾಸ್ತವನ್ನು ನೋಡಲೆಂದು ಸಮುದ್ರದ ದಡದಲ್ಲಿ ಬಹುದೂರ ಹೋದೆವು, ಕಡೆಗೂ ಸೂರ್ಯಾಸ್ತ ನೋಡಿ ಮುಗಿಸಿದ ಬಳಿಕ ಹಿಂದಿರುಗಲು ನಮಗೆ ಆಟೋ ಸಿಗಲಿಲ್ಲ, ಕತ್ತಲು ಆವರಿಸತೊಡಗಿತು, ಆಗ ಹೆಜ್ಜೆಗಳನ್ನು ಹಾಕುತ್ತಾ ನಾವು ತಂಗಿದ್ದ ವಸತಿ ಗೃಹದ ಕಡೆಗೆ ಹೊರೆಟೆವು, ನಡಿಗೆ ಸಾಗಿತು ಕಡಲ ತೀರದ ಬದಿಯಲ್ಲಿ ಒಂಟಿ ಹೆಣ್ಣು ಕುಳಿತಿರುವುದನ್ನು ಕಂಡು ಸ್ವಲ್ಪ ದೂರದಲ್ಲೇ ನಾವು ಕುಳಿತುಕೊಂಡೆವು.

ನನ್ನ ಮನಸಿನಲ್ಲಿ ಸಂದೇಹ ಆವರಿಸಿತು, ಆಕೆ ಏನಾದರೂ ಆತ್ಮಹತ್ಯೆ ಮಾಡಿಕೊಳ್ಳಲು ಒಬ್ಬಳೇ ಬಂದಿದ್ದಾಳೆಯೇ ಎಂಬ ಸಂದೇಹ ಕಾಡಿತು, ಆಕೆ ನೋಡಲು ಒಳ್ಳೆಯ ವಿದ್ಯಾವಂತೆ ತರಹ ಕಾಣುತ್ತಿದ್ದಳು, ನನ್ನ ಹೆಂಡತಿಗೆ ಹೇಳಿದೆ ಮಾತನಾಡಿಸು ಅಂತ, ಆಗ ವಿಳಾಸ ಕೇಳುವ ನೆಪದಲ್ಲಿ ಪರಿಚಯ ಮಾಡಿಕೊಂಡೆವು ಹಾಗೂ ನಾವು ತಂಗಿದ್ದ ವಸತಿ ಗೃಹದ ಸನಿಹವೇ ಆಕೆಯ ಹಾಸ್ಟೆಲ್ ಇರುವುದು ಎಂದು ತಿಳಿದು ಹಾಗೂ ನಾನೊಬ್ಬ ವಕೀಲರು ಎಂದು ತಿಳಿದು ಕೂಡಲೇ ಕೆಲವು ಕಾಯ್ದೆ, ಕಾನೂನು ಪ್ರಕ್ರಿಯೆ ಬಗ್ಗೆ ವಿಚಾರಿಸ ತೊಡಗಿದಳು, ಆಗ ನಾನು ನನಗೆ ತಿಳಿದಿರುವ ಮಟ್ಟಿಗೆ ಆಕೆಗೆ ವಿವರಿಸಿದೆ ಹೀಗೆ ಮಾತು ಮುಂದುವರೆಯುತ್ತಾ ಆಕೆಗೆ ಆದ ಅನ್ಯಾಯದ ಕಥೆ ವಿವರಿಸತೊಡಗಿದಳು.

ಮಹಾರಾಷ್ಟ್ರದ ( ಹೆಸರು ಬದಲಿಸಿದೆ ) ಪುಣೆ ( ಹೆಸರು ಬದಲಿಸಿದೆ ) ಸಮೀಪದ ಒಂದು ಹಳ್ಳಿಯ ಬಡ ಕುಟುಂಬದಲ್ಲಿ ಈಕೆಯ ಜನನವಾಗುತ್ತದೆ ಹಾಗೂ ಈಕೆಗೆ ಮೂರು ಜನ ಸಹೋದರಿಯರು ಹಾಗೂ ಆಕೆಯ ಹೆಸರು ಸೌಮ್ಯ ( ಹೆಸರು ಬದಲಿಸಿದೆ ). ಸೌಮ್ಯ ಹುಟ್ಟಿದ ಕುಟುಂಬದಲ್ಲಿ ಹೆಣ್ಣು ಮಕ್ಕಳ ಮದುವೆಯೇ ಆಕೆಯ ತಂದೆಗೆ ಒಂದು ಚಿಂತೆಯಾಗಿರುತ್ತದೆ ಆದರೆ ಎಲ್ಲಾ ಹೆಣ್ಣು ಮಕ್ಕಳು ಪ್ರತಿಭಾವಂತರು ಹೀಗೆಯೇ ದಿನಗಳು ಸಾಗುತ್ತಿರುವಾಗ, ಹಿರಿಯ ಮಗಳಾದ ಸೌಮ್ಯಳಿಗೆ ಸಂಬಂಧಿಗಳು ಒಬ್ಬ ವರನನ್ನು ಮದುವೆಗೆ ಹುಡುಕುತ್ತಾರೆ, ದುರಾದೃಷ್ಟ ದಿಂದ ಆತನ ಜೊತೆ ಸೌಮ್ಯಳ ವಿವಾಹ ಆಗಿಬಿಡುತ್ತದೆ.

ಎರಡು ತಿಂಗಳ ವೈವಾಹಿಕ ಜೀವನದ ನಂತರ ಸೌಮ್ಯಳಿಗೆ ತನ್ನ ಗಂಡನ ನಿಜ ಸತ್ಯ ತಿಳಿಯುತ್ತದೆ. ಸೌಮ್ಯಳ ಗಂಡನಿಗೆ ಸೌಮ್ಯ ಮೂರನೇ ಹೆಂಡತಿ ಎಂದು,ಅಲ್ಲಿಂದ ಸೌಮ್ಯಳ ಗೋಳಾಟ ನರಳಾಟ ಆರಂಭವಾಗುತ್ತೆ, ತನ್ನ ಗಂಡ ಒಳ್ಳೆಯವನು ಆಗಿದ್ದರೆ ಹೇಗೋ ಮೂರನೇ ಹೆಂಡತಿ ಆಗಿ ಜೀವನ ನಡೆಸುತ್ತಿದ್ದಳು ಆದರೆ ಆತ ದೊಡ್ಡ ಕುಡುಕ ಮತ್ತು ಅತಿ ಕೆಟ್ಟ ತರಹದ ಚಟಗಳನ್ನು ಅಭ್ಯಾಸ ಮಾಡಿಕೊಂಡಿದ್ದ ಈ ಎಲ್ಲಾ ವಿಷಯ ತಿಳಿದ ಸೌಮ್ಯ ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾಳೆ ಆಗ ಆಕೆಯ ಗಂಡ ಆಕೆಯನ್ನು ರೂಮಿನಲ್ಲಿ ಕೂಡಿ ಹಾಕುತ್ತಾನೆ ಮತ್ತು ನಿರಂತರ ಕಿರುಕುಳ ನೀಡುತ್ತಿರುತ್ತಾನೆ ಒಂದು ದಿನ ಗಂಡನ ಸಂಬಂಧಿ ಸೌಮ್ಯಳಿಗೆ ಸಹಾಯ ಮಾಡುವ ರೀತಿ ನಾಟಕ ಮಾಡಿ ಆಕೆಯನ್ನು ಕೆಟ್ಟದಾಗಿ ಬಳಸಿಕೊಳ್ಳುತ್ತಾನೆ ಹಾಗೂ ಈ ಕೃತ್ಯವನ್ನು ಆಕೆಯ ಗಂಡನೇ ಮಾಡಿಸಿ, ಆಕೆಗೆ ಅನೈತಿ–ಕ ಸಂಬಂಧ ಇದೆ ಎಂದು ಬಿಂಬಿಸಿ ಆಕೆಯ ತಂದೆ ತಾಯಿ ರವರಿಗೆ ಕೆಟ್ಟ ಅಭಿಪ್ರಾಯ ಬರುವಂತೆ ಮಾಡಿ ಸೌಮ್ಯಳ ತಂದೆ ತಾಯಿಯ ಸಹಾಯ ಸೌಮ್ಯಳಿಗೆ ಸಿಗದಂತೆ ಮಾಡುತ್ತಾನೆ ಮತ್ತು ಸೌಮ್ಯಳ ತಂದೆ ತಾಯಿ ಈಕೆಯನ್ನು ರಕ್ಷಿಸಲು ಅವರಿಗೆ ಹೆದರಿಕೆ, ಬಡತನ ಮತ್ತು ಆಕೆಯ ತಂಗಿಯರ ಮದುವೆಗೆ ಎಲ್ಲಿ ತೊಂದರೆ ಆಗುತ್ತೋ ಎಂಬ ಭಯ.

ಒಂದು ದಿನ ತನ್ನ ಗಂಡ ಕೂಡಿಹಾಕಿದ್ದ ರೂಮಿನಿಂದ ಹೇಗೋ ಸೌಮ್ಯ ತಪ್ಪಿಸಿಕೊಂಡು ರಾತ್ರಿ ಉಡುಪಿನಲ್ಲೇ ಮನೆಯಿಂದ ತಪ್ಪಿಸಿಕೊಂಡು ಕಿರುಚಾಡಿಕೊಂಡು ಪೊಲೀಸ್ ಠಾಣೆಗೆ ಹೋಗುತ್ತಾಳೆ ಹಾಗೂ ದೂರು ಹೇಳುತ್ತಲೇ ಆದರೆ ಆಕೆಯ ಗಂಡ ಮತ್ತು ಮಾವ ರಾಜಕೀಯವಾಗಿ ಅತೀ ಪ್ರಭಾವಿ ಆಗಿದ್ದ ಕಾರಣ ಅವರ ಮೇಲೆ ದೂರು ದಾಖಲಿಸುವುದಿಲ್ಲ ಕೂಡಲೇ ಪೊಲೀಸರು ಆಕೆಯ ಗಂಡನಿಗೆ ಬರ ಹೇಳುತ್ತಾರೆ. ಆಗ ಬಂದಂತಹ ಆಕೆಯ ಗಂಡ ಮತ್ತು ಮಾವ, ಆಕೆಯ ವಿರುದ್ಧವೇ ಅನೈತಿಕ ಸಂಭಂದ ಹಾಗೂ ಮನೆಯಲ್ಲಿ ಕಳ್ಳತನ ಮಾಡಿರುವ ಕುರಿತಾಗಿ ಸೌಮ್ಯಳ ಮೇಲೆ ದೂರು ನೀಡುತ್ತಾರೆ ಹಾಗೂ ಪೋಲಿಸರು ಈ ದೂರನ್ನು ನೊಂದಣಿ ಮಾಡುತ್ತಾರೆ.

ಎಲ್ಲಾ ವಿಚಾರಣೆ ಮುಗಿದ ಮೇಲೆ ಆಕೆಯನ್ನು ಪೋಲಿಸರು ಗಂಡನ ಜೊತೆಯಲ್ಲಿ ಕಳುಹಿಸುತ್ತಾರೆ, ಮತ್ತೆ ಆಕೆಯ ಗಂಡ ಸೌಮ್ಯಳನ್ನು ರೂಮ್ ನಲ್ಲಿ ಕೂಡಿ ಹಾಕುತ್ತಾನೆ, ಆಕೆಯ ಮೊಬೈಲ್ ಅನ್ನು ಸಹ ಕಿತ್ತು ಇಟ್ಟುಕೊಳ್ಳುತ್ತಾನೆ,ಇದರಿಂದ ಇನ್ನೂ ನೊಂದ ಸೌಮ್ಯ ಊಟವನ್ನೂ ಬಿಟ್ಟು ಬಿಡುತ್ತಾಳೆ, ಸತತ ಒಂಬತ್ತು ದಿನದ ನಂತರ ಆಕೆ ಪ್ರಜ್ಞೆ ಕಳೆದುಕೊಳ್ಳುತ್ತಾಳೆ ಆಗ ಆಕೆಯ ಗಂಡ ಮತ್ತು ಮಾವ ಅತಿ ಶ್ರೀಮಂತರು ಮತ್ತು ರಾಜಕೀಯ ಪ್ರಭಾವಿ ಆಗಿದ್ದರೂ ಸಹ ಸರ್ಕಾರಿ ಆಸ್ಪತ್ರೆಗೆ ಸೇರಿಸುತ್ತಾರೆ, ಚಿಕಿತ್ಸೆಯ ನಂತರ ಆಕೆಗೆ ಪ್ರಜ್ಞೆ ಬರುತ್ತದೆ ನಂತರ ವೈದ್ಯರು ಮತ್ತು ಆಸ್ಪತ್ರೆಯಲ್ಲಿ ಪೋಲಿಸರು ಸೌಮ್ಯಳದ್ದೇ ತಪ್ಪು ಎಂದು ಆಕೆಗೆ ಬೈದು ಹೋಗುತ್ತಾರೆ.

ಸರ್ಕಾರಿ ಆಸ್ಪತ್ರೆಯಲ್ಲಿದ್ದ ಒಬ್ಬರು ನರ್ಸ್ ನ ಬಳಿ ತನಗಾದ ಅನ್ಯಾಯವನ್ನು ಎಲ್ಲಾ ಹೇಳಿಕೊಳ್ಳುತ್ತಲೇ, ಆಗ ಆ ನರ್ಸ್ ಆಕೆಗೆ ಐದು ಸಾವಿರ ಹಣ ನೀಡಿ ಯಾರಿಗೂ ಗೊತ್ತಾಗದ ರೀತಿಯಲ್ಲಿ ಇಲ್ಲಿಂದ ಹೊರಟು ಹೋಗು ನಿನ್ನ ಜೀವನ ನೋಡಿಕೋ ಎಂದು ಹೇಳುತ್ತಾರೆ. ಸೌಮ್ಯ ಆ ಹಣವನ್ನು ಪಡೆದು ಕೂಡಲೇ ಆ ರಾಜ್ಯವನ್ನೇ ಬಿಟ್ಟು ಸಾವಿರಾರು ಕಿಲೋಮೀಟರ್ ದೂರದ ರಾಜ್ಯಕ್ಕೆ ತೆರಳಿ, ಅಲ್ಲಿ ಆಕೆಯ ಸ್ನೇಹಿತೆಯ ಸಹಾಯ ಪಡೆದು ಒಂದು ಕೆಲಸ ಹುಡುಕಿಕೊಳ್ಳುತ್ತಾಳೆ.

ತನಗಾದ ಅನ್ಯಾಯದ ವಿರುದ್ಧ ಹೋರಾಡುವ ಸಂಕಲ್ಪ ಮಾಡಿ ಕಾನೂನು ಅಧ್ಯಯನ ಮಾಡಿ ಮತ್ತು ಉತ್ತಮ ಮಾರ್ಗದಲ್ಲಿ ಕೆಲಸ ಮಾಡಿ ಹಣ ಸಂಪಾದನೆ ಮಾಡಿ ಕೆಲವು ವರ್ಷಗಳ ನಂತರ ಗಂಡನ ಮನೆಯ ನಗರಕ್ಕೆ ಬಂದು ನೆಲಸುತ್ತಾಳೆ ಹಾಗೂ ಕಾನೂನು ಸಮರ ಶುರು ಮಾಡುತ್ತಾಳೆ ಆದರೆ ಪ್ರಭಾವಿಗಳ ಮುಂದೆ ಸೌಮ್ಯಳ ಪ್ರಯತ್ನಕ್ಕೆ ಹಿನ್ನಡೆ ಆದರೂ ಸರಿಯಾದ ಕಾನೂನು ಪ್ರಕ್ರಿಯೆಗಳಿಂದ ಮುನ್ನಡೆ ಗಳಿಸುತ್ತಾಳೆ ಆಕೆಗೆ ಅನ್ಯಾಯ ಮಾಡಿದ ಪೊಲೀಸರು ಆಕೆಗೆ ಶರಣಾಗುವಂತ ಪರಿಸ್ಥಿತಿಗೆ ತರುತ್ತಾಳೆ ಮತ್ತು ಕಡೆಗೆ ಸೌಮ್ಯಳನ್ನು ಹತ್ಯೆ ಮಾಡುವ ಪ್ರಯತ್ನವೂ ಆಗುತ್ತದೆ ಯಾವುದಕ್ಕೂ ಜಗ್ಗದ ಸೌಮ್ಯ ಸದೃಢವಾಗಿ ಕಾನೂನು ಹೋರಾಟ ನಡೆಸುತ್ತಾಳೆ ಒಂದು ಹಂತದಲ್ಲಿ ಆಕೆಗೆ ತೊಂದರೆ ಕೊಟ್ಟ ಎಲ್ಲರೂ ಆಕೆಗೆ ಶರಣಾಗುತ್ತಾರೆ ಸಂಧಾನ ಮಾಡುತ್ತಾರೆ ಆದರೆ ಸಂಧಾನಕ್ಕೆ ಒಪ್ಪದ ಸೌಮ್ಯ ಕಾನೂನು ಸಮರವನ್ನು ಮುಂದುವರೆಸುತ್ತಾಳೆ. ಒಂಟಿ ಜೀವನ ತನ್ನವರು ಎಂಬವುವವರು ಯಾರೂ ಇಲ್ಲದಂತಹ ಸಂದರ್ಭದಲ್ಲಿ ಸೌಮ್ಯಳಿಗೆ ಆಸರೆ ಆಗಿದ್ದು ಕಾನೂನು ಅಧ್ಯಯನ, ಇಂದಿಗೂ ಆಕೆ ಜೀವಂತವಾಗಿ ಇದ್ದಾಳೆ ಎಂದರೆ ಆಕೆಯ ಕಾನೂನು ಅಧ್ಯಯನವೇ ಕಾರಣ, ಇಂದು ಸದೃಢವಾಗಿ ಜೀವನ ಕಟ್ಟಿಕೊಂಡು ಸೌಮ್ಯ ಬದುಕುಳಿದಿರುವುದು ಸಂತಸದ ವಿಷಯವೇ ಸರಿ. ಈ ಎಲ್ಲಾ ವಿಚಾರಗಳಿಂದ ನಾನು ನಿಮಗೆ ತಿಳಿಸುವುದು ಏನೆಂದರೆ, ನಾವು ನಮ್ಮ ಜೀವನವನ್ನು ಸದೃಢ ಮತ್ತು ಸುರಕ್ಷಿತವಾಗಿ ಇಟ್ಟುಕೊಳ್ಳಲು ಕಾನೂನು ಅಧ್ಯಯನ ಮಾಡುವುದು ಒಳಿತು. ಕಾನೂನು ಅಧ್ಯಯನ ಅಂದರೆ ಕಾನೂನಿನಲ್ಲಿ ಪದವಿಯನ್ನೇ ಮಾಡಬೇಕೆಂದಲ್ಲ ಕಾನೂನು ವಿಚಾರಗಳನ್ನು ಅರಿತುಕೊಳ್ಳುವುದು ಹಾಗೂ ಕಾನೂನು ಕು–ರಿತಾಗಿ ಸಮಯ ಸಿಕ್ಕಾಗ ಅಧ್ಯಯನ ಮಾಡುವುದು. ಈ ಅಭ್ಯಾಸ ಒಂದುದಿನ ದುಷ್ಟರಿಂದ ನಮಗೆ ಏನಾದರೂ ತೊಂದರೆ ಉಂಟಾದಾಗ ಈ ಕಾನೂನು ಅರಿವು ನಮಗೆ ರಕ್ಷಣೆ ನೀಡುತ್ತದೆ.

## ವಕೀಲರ ಮೇಲಿನ ಹಲ್ಲೆ ಖಂಡಿಸಿ ಮನವಿ ಸಲ್ಲಿಕೆ

**ಬೆಳಗಾವಿ/ಬೈಲಹೊಂಗಲ:** ಭಾರತೀಯ ವಕೀಲ ಪರಿಷತ್ತಿನ ಸದಸ್ಯರಾದ ವಕೀಲ ವೈ. ಆರ್. ಸದಾಶಿವರೆಡ್ಡಿ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಬೈಲಹೊಂಗಲ ನ್ಯಾಯವಾದಿಗಳ ಸಂಘದಿಂದ ಎಲ್ಲಾ ವಕೀಲರ ಸಮ್ಮುಖದಲ್ಲಿ ತಾಲೂಕಾ ಉಪ ವಿಭಾಗ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ನ್ಯಾಯವಾದಿಗಳ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ವಿ. ಜಿ. ಕಟದಾಳ ಮಾತನಾಡಿ ನಡೆದ ಹಲ್ಲೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಮನವಿ ಅರ್ಪಿಸಿದರು.

**ವರದಿ ಮಂಜು. ಎಮ್. ಚಿಕ್ಕಣ್ಣವರ**





**ಉದ್ಯಮಿ ,ಸಮಾಜ ಸೇವಕರು ಹಾಗೂ ಬೆಳಗಾವಿ ಜಿಲ್ಲೆಯ ಯುವ ಜನತಾದಳ ಜಿಲ್ಲಾಧ್ಯಕ್ಷರಾದ ಸುನಿಲ್ ವರ್ಣೇಕರ್ ಅವರೊಂದಿಗೆ " ಕರುನಾಡ ಕಂದ ".**

ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01–05–2025 ಪುಟಗಳು:16

# ಪಾರ್ವತಿ

## (ಒಬ್ಬ ಕರುಣಾಮಯಿ ತಾಯಿಯ ಕಥೆ)

ಪಾರ್ವತಿ ಈ ಲೋಕದ ಋಣಮುಗಿಸಿ ಇಂದಿಗೆ ನಾಲ್ಕು ದಿನಗಳಾಗಿವೆ. ಮಗ ವಿದೇಶದಿಂದ ಬಂದು ಅಂತ್ಯಕ್ರಿಯೆ ಮಾಡುತ್ತಾನೆಂದು ಅವಳ ಮೃತ ಶರೀರವನ್ನು ಶವಾಗಾರದಲ್ಲಿರಿಸಿದ ಅಳಿಯ. ಅವಳು ಸತ್ತಳೆಂದು ಅಳುವವರು ಯಾರೂ ಇಲ್ಲ. ಈ ಜೀವನವೇ ಸಾಕೆಂದು ಅನಿಸಿತ್ತು ಅವಳಿಗೆ. 3 ವರ್ಷಗಳ ಹಿಂದೆ ಗಂಡ ಸತ್ತಾಗ ಅವಳಿಗೆ ಜೀವನವೇ ಶೂನ್ಯ ಎನಿಸಿತ್ತು. ತಡೆಯಲಾರದ ದುಃಖ, ತನಗೆ ಜೀವನದಲ್ಲಿ ಆಧಾರ ಎಂದು ಇದ್ದದ್ದು ಗಂಡ ಮಾತ್ರ. ಇದ್ದ 3 ಮಕ್ಕಳು ಗಂಡನ ಮೊದಲ ಹೆಂಡತಿ ಮಕ್ಕಳು. ಪಾರ್ವತಿ ಎಂದಿಗೂ ಮನಸ್ಸಲ್ಲಿ ಅವರು ತನ್ನ ಮಕ್ಕಳು ಅಲ್ಲ ಎಂದು ಅಂದುಕೊಂಡವಳೇ ಅಲ್ಲ, ಮದುವೆಗೆ ಮೊದಲು ತಾನು ಜವಾಬ್ದಾರಿ ವಹಿಸಿಕೊಂಡು ವಿದ್ಯೆ ಕಲಿಸಿದ ತನ್ನ 3 ಜನ ತಮ್ಮ– ತಂಗಿಯರೇ ತನ್ನ ಮಕ್ಕಳು. ಮದುವೆ ನಂತರ ತನ್ನ ಗಂಡನ 3 ಮಕ್ಕಳೇ ತನ್ನ ಮಕ್ಕಳು, ಹೀಗೆ ತನಗೆ 6 ಜನ ಮಕ್ಕಳು ಎಂದು ಹೇಳುವವಳು ಪಾರ್ವತಿ. ತನ್ನ ಗಂಡ ಇದ್ದಾಗ ತನ್ನ ಸಣ್ಣ ಮಗಳು ಯಾವಾಗಲೂ ಬರುವವಳು, " ಅಪ್ಪಾ" ಎಂದು ಬಾಯಿ ತುಂಬಾ ಕರೆವಳು. ಹತ್ತಿರದಲ್ಲೇ ಇದ್ದ ಸಣ್ಣ ಮಗಳ ಮಕ್ಕಳು ಯಾವಾಗಲೂ ಅಜ್ಜನ ಮನೆಗೆ ಬರುವವರು. ಬಾಯಿ ತುಂಬಾ ತನ್ನನ್ನು ಅಜ್ಜಿ ಎಂದು ಕರೆಯುತ್ತಿದ್ದರು. ತಾನು ಮಾಡುತ್ತಿದ್ದ ತಿಂಡಿ ತಿನಿಸು ಎಲ್ಲಾ ತನ್ನ ಮಕ್ಕಳಿಗೆ ಇಷ್ಟ ಎಂದು ಕೊಂಡೊಯ್ಯುತ್ತಿದ್ದ ಸಣ್ಣ ಮಗಳು ಅಪ್ಪನಿಗೆ ಬೇಸರವಾಗಬಾರದು ಎಂದು ಬಾಯ್ತುಂಬಾ ಅಮ್ಮಾ ಎಂದು ಕರೆಯುತ್ತಿದ್ದಳು.

ಆಕೆಗೆ ಚಿಕ್ಕಮ್ಮನ ಬಗ್ಗೆ ಎಷ್ಟು ತಾತ್ಸಾರ ಇತ್ತು ಎಂದು ಪಾರ್ವತಿಗೆ ತಿಳಿದಿದ್ದೇ ತನ್ನ ಗಂಡ ಸತ್ತು ವರ್ಷದ ದಿನಕ್ಕೆ. 3 ಜನ ಮಕ್ಕಳೂ ಆಕೆಯನ್ನು ಮನೆಯಲ್ಲಿ ಒಂಟಿಯಾಗಿ ಬಿಟ್ಟು, ಇನ್ನು ನೀನು ನಿನ್ನ ಮನೆಯಲ್ಲೇ ಇರಬೇಕು, ನಾವು ಹೇಳಿ ಕೇಳಿ ವೈದ್ಯ ವೃತ್ತಿ ಆರಿಸಿಕೊಂಡವರು ನಮಗೆ ನಿನ್ನ ಬೇಕು–ಬೇಡ ಪೂರೈಸಲು ಸಮಯವಿಲ್ಲ. ನಿನ್ನ ತಮ್ಮಂದಿರಲ್ಲೋ, ವಠಾರದ ಸುತ್ತಮುತ್ತಲಿನ ಮನೆಯವರಲ್ಲೋ ಕೇಳಿ ನಿನಗೆ ಏನು ಬೇಕೋ ಅದನ್ನೆಲ್ಲಾ ಅವರಲ್ಲಿ ಕೇಳಿ ತರಿಸಿಕೋ, ಅಪ್ಪನ ಠೇವಣಿ ಹಣ ಎಲ್ಲಾ ನಿನಗೇ, ನಮಗೆ ಏನೂ ಬೇಡ, ನಿನ್ನ ಒಡವೆ ನಮಗೆ ಬೇಡ, ಅಪ್ಪನ ಆಸ್ತಿ ಎಲ್ಲಾ ನಿನಗೇ, ನೀನು ಸರ್ವ ತಂತ್ರ ಸ್ವತಂತ್ರಳು ನಮ್ಮನ್ನು ಯಾವುದೇ ಸಹಾಯಕ್ಕೆ ಕರೆಯಬೇಡ ಎಂದು ಹೇಳಿ ಮೂರು ಮಕ್ಕಳು ತಮ್ಮ ಸ್ವಸ್ಥಾನ ಸೇರಿದವರು.

ತನ್ನ 38ನೇ ವಯಸ್ಸಿಗೆ 2ನೇ ಹೆಂಡತಿಯಾಗಿ ಗಂಡನ ಮನೆ ಸೇರಿದ ಪಾರ್ವತಿಗೆ, ಗಂಡನ ಮನೆಯ ಸುಖ ಜೀವನದಲ್ಲಿ ತನ್ನ ಹಿಂದಿನ ತವರಿನ ಬಡತನದ ಜೀವನವನ್ನು ಮರೆತವಳಲ್ಲ, ಮನೆಯಲ್ಲಿ ಕೆಲಸಕ್ಕೆ ಆಳುಗಳು, ದೊಡ್ಡ ಹುದ್ದೆಯಲ್ಲಿರುವ ಗಂಡ, ಮೇಲ್ದರ್ಜೆ ಅಧಿಕಾರಿಗಳ ಕುಟುಂಬದ ಸ್ನೇಹ, ಇದೆಲ್ಲಾ ಪಾರ್ವತಿಗೆ ಹೊಸದು. ಮನೆಯಲ್ಲಿ ತಾರುಣ್ಯಕ್ಕೆ ಕಾಲಿಟ್ಟ ಮಕ್ಕಳ ತಾಯಿಯಾಗಿ ತನ್ನ ಕರ್ತವ್ಯ ನಿರ್ವಹಿಸುವ ಜವಾಬ್ದಾರಿ. ಒಮ್ಮೆಲೇ ದೊಡ್ಡ ಮಕ್ಕಳ ತಾಯಿಯಾಗಿ ಜವಾಬ್ದಾರಿ ವಹಿಸಿಕೊಂಡ ಪಾರ್ವತಿಗೆ ಅದನ್ನು ನಿಭಾಯಿಸುವುದು ದುಸ್ತರ ಅನಿಸಿದ್ದುಂಟು. ಆದರೂ ತಾನು ಮದುವೆಗೆ ಮೊದಲು ಪಟ್ಟ ಪಾಡು ನೆನೆಸಿಕೊಂಡಾಗ ಇದೇನೂ ಅಲ್ಲ ಅನಿಸಿದ್ದೂ ಇದೆ. ಮದುವೆಗೆ ಮೊದಲು ಹಿರಿಯ ಅಣ್ಣಂದಿ–ರಿಬ್ಬರು ಇದ್ದೂ ಮನೆಯ ಜವಾಬ್ದಾರಿ ಪಾರ್ವತಿಯ ಹೆಗಲೇರಿತ್ತು. ದೊಡ್ಡಣ್ಣನೋ ಊರು ಬಿಟ್ಟು ಹೊರ ರಾಜ್ಯದಲ್ಲೇ ಕೆಲಸ ಸಿಕ್ಕಿ ಊರಿಗೆ ಬರುವುದೇ ವರ್ಷಕ್ಕೊಮ್ಮೆ. ಸಣ್ಣ ಅಣ್ಣನೋ ವಿದೇಶಕ್ಕೆ ಹೋದವ ಸ್ವದೇಶಕ್ಕೆ ಮರುಳುವುದೇ 6–8 ವರ್ಷಕ್ಕೊಮ್ಮೆ. ಕಾರಣ, ಪಾರ್ವತಿಯ ಅಮ್ಮನಿಗೆ ತನ್ನ ಕಷ್ಟ ಹೇಳಿಕೊಳ್ಳಲು ಪಾರ್ವತಿ ಬಿಟ್ಟರೆ ಬೇರೆ ಯಾರೂ ಇಲ್ಲ. ತನ್ನ 8 ಜನ ಮಕ್ಕಳಲ್ಲಿ ಮನೆ ಜವಾಬ್ದಾರಿ ನಿಭಾಯಿಸಲು ಹೊರಟಿರುವ ಪಾರ್ವತಿಯೇ ಅವಳಮ್ಮನಿಗೆ ಗಂಡುಮಗ. ಎಲ್ಲಾ ಜವಾಬ್ದಾರಿಯನ್ನೂ ಪಾರ್ವತಿಯೇ ನಿಭಾಯಿಸುತ್ತಾಳೆಂದು ಅವಳಮ್ಮನ ನಂಬಿಕೆ.

ಗಂಡುಮಕ್ಕಳು ಇದ್ದೂ ತಾನೇ ಮನೆ ಜವಾಬ್ದಾರಿ ಹೊರಬೇಕಲ್ಲ ಎಂಬ ಯಾವುದೇ ದುಗುಡ ಪಾರ್ವತಿಗೆ ಇರಲಿಲ್ಲ, ಆಕೆ ಜವಾಬ್ದಾರಿಗೆ ಎಂದೂ ಬೆನ್ನು ತಿರುಗಿಸಿ ನಿಂತವಳೇ ಅಲ್ಲ. ತನ್ನ ಇಬ್ಬರು ಕೊನೆಯ ತಮ್ಮಂದಿರ ವಿದ್ಯಾಭ್ಯಾಸದ ಜವಾಬ್ದಾ–ರಿಯನ್ನು ತಾನೇ ವಹಿಸಿಕೊಂಡು, ಅವರ ಜೀವನಕ್ಕೆ ದಾರಿ ಮಾಡಿಕೊಟ್ಟವಳು ಪಾರ್ವತಿ. ತಾನು ಕನ್ಯೆಯಾಗಿಯೇ ಉಳಿದೆನಲ್ಲಾ ಎಂಬ ಕೊರಗು ಎಂದೂ ಪಾರ್ವತಿಯ ಮನಸ್ಸಿಗೆ ಬರಲೇ ಇಲ್ಲ. ತನ್ನ ತಂಗಿಯಂದಿರು ಮದುವೆಯಾಗಿ ಗಂಡನ ಮನೆ ಸೇರಿದರೂ ತಾನು ಇನ್ನೂ ಕನ್ಯೆಯಾಗಿ ಉಳಿದು, ತನ್ನ ಮನೆಯ ಜವಾಬ್ದಾ–ರಿಯನ್ನು ಅಪ್ಪಿಕೊಂಡವಳು, ಒಪ್ಪಿಕೊಂಡವಳು ಪಾರ್ವತಿ. ಅವಳ



ಅಪ್ಪ, ಅಮ್ಮ, ತಮ್ಮ, ತಂಗಿಯಂದಿರಷ್ಟೇ ಅವಳ ಪ್ರಪಂಚ. ಅದು ಬಿಟ್ಟು ತನ್ನ ಮುಂದಿನ ಜೀವನದ ಬಗ್ಗೆ ಎಂದೂ ಯೋಚಿಸಿದವಳೇ ಅಲ್ಲ. ಪಾರ್ವತಿಯ ಜೀವನದ ಹಾದಿ ಬದಲಾಗಿದ್ದೇ ಅವಳ ಜೀವನದ 38 ವಸಂತ ಕಳೆದ ನಂತರ. ತಾನು ಬಾಡಿಗೆಗೆ ಇದ್ದ ಮನೆಯ ಮಾಲಕರ ತಮ್ಮ ಮತ್ತು ಅವನ ಕುಟುಂಬ ದೂರದ ರಾಜ್ಯದಲ್ಲಿ ಯಾವುದೋ ಪ್ರವಾಸಕ್ಕೆ ಹೋಗಿದ್ದಾಗ ಅಪಘಾತವಾಗಿ ಮಾಲಕರ ತಮ್ಮನ ಹೆಂಡತಿ ಸ್ಥಳದಲ್ಲೇ ಮೃತಪಟ್ಟಾಗ, ಮಾಲಕರ ತಮ್ಮ ಮತ್ತು ಮಕ್ಕಳು ದಿಕ್ಕೆಟ್ಟಂತಾದಾಗ, ಮನೆಯ ಮಾಲಕರು ತಮ್ಮ ದೊಡ್ಡ ಮಗಳನ್ನು ತಮ್ಮನ ಮನೆಗೆ ಕಳುಹಿಸಿಕೊಟ್ಟವರು, ತಮ್ಮನಿಗೆ ಇನ್ನೊಂದು ಮದುವೆ ಮಾಡುವುದೇ ಇದಕ್ಕೆ ಸೂಕ್ತ ಪರಿಹಾರ ಎಂದು ಮನಸ್ಸಿಗೆ ಬಂದ ಕೂಡಲೇ ತಮ್ಮನ 2ನೇ ಮದುವೆಗೆ ಕನ್ಯಾನ್ವೇಷಣೆಗೆ ಹೊರಟವರಿಗೆ ಮನಸ್ಸಿಗೆ ಮೊದಲಿಗೆ ಬಂದ ಕನ್ಯೆಯೇ ಪಾರ್ವತಿ.

ರೇಷನ್ ಅಂಗಡಿಯಲ್ಲಿ ಕೆಲಸಕ್ಕಿದ್ದು ತನ್ನ ಮನೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುತ್ತಿರುವ ಪಾರ್ವತಿ ತನ್ನ ತಮ್ಮನ ಮನೆಯ ಜವಾಬ್ದಾ–ರಿಯನ್ನು ಹೊರಬಲ್ಲಳು, ಮುರಿದು ಹೋದ ಸಂಸಾರವನ್ನು ಪುನಃ ಕಟ್ಟಬಲ್ಲಳು ಎಂಬ ವಿಶ್ವಾಸದಿಂದ ಪಾರ್ವತಿಯನ್ನು ತನ್ನ ತಮ್ಮನಿಗೆ 2ನೇ ಮದುವೆಗೆ ಶಿಫಾರಸ್ಸು ಮಾಡಿ, ತಮ್ಮನನ್ನು ಒಪ್ಪಿಸಿ ಮದುವೆ ಮಾಡಿಸಿಯೇ ಬಿಟ್ಟರು. 10–12 ವರ್ಷದ 3 ದೊಡ್ಡ ಮಕ್ಕಳ ತಾಯಿಯಾಗಿ, ತನ್ನ ಗಂಡನಿಗೆ 2ನೇ ಹೆಂಡತಿಯಾಗಿ ತನ್ನ ಗಂಡನ ಮನೆಗೆ ಕಾಲಿಟ್ಟವಳು ಪಾರ್ವತಿ. ನಂತರ ತನ್ನ ಗಂಡ ಕೆಲಸದಲ್ಲಿದ್ದ ದೂರದ ರಾಜ್ಯಕ್ಕೆ ತನ್ನ ಗಂಡ ಮತ್ತು ಮಕ್ಕಳೊಂದಿಗೆ ಪಯಣ ಬೆಳೆಸಿದಳು. ಪಾರ್ವತಿಗೆ ತನ್ನ ತವರಿನಲ್ಲಿ ಎಲ್ಲಾ ಜವಾಬ್ದಾರಿ ತಾನೇ ಹೊತ್ತು, ರೇಷನ್ ಅಂಗಡಿಯ ಕೆಲಸದಿಂದ ಬರುವ ಸಂಬಳದಿಂದ ಮನೆ ಜವಾಬ್ದಾರಿ ನಿಭಾಯಿಸಿದ ಪಾರ್ವತಿಗೆ ತನ್ನ ಗಂಡನ ಮನೆಯ ಜವಾಬ್ದಾರಿ, ಮಕ್ಕಳ ಜವಾಬ್ದಾರಿ ಯಾವುದೂ ಹೊರೆ ಅನಿಸಲೇ ಇಲ್ಲ. ಎಲ್ಲವನ್ನೂ ಸುಲಲಿತವಾಗಿ ನಿಭಾಯಿಸಿದಳು. ಆದರೆ ಮಲಮಕ್ಕಳಲ್ಲಿ ಅವಳ ಬಗ್ಗೆ ಉಪೇಕ್ಷೆ ಇದ್ದ ಬಗ್ಗೆ ಅವಳಿಗೆ ಅರಿವಿಗೆ ಬರಲೇ ಇಲ್ಲ. ಮಕ್ಕಳೇ ಅಪ್ಪನಿಗೆ ಬೇಸರವಾಗಬಾರದೆಂದು, ತಮಗೆ ಮಲತಾಯಿಯಲ್ಲಿ ಇದ್ದ ಉಪೇಕ್ಷೆಯನ್ನು ಅಪ್ಪನ ಮುಂದೆ ತೋರ್ಪಡಿಸಲೇ ಇಲ್ಲ. ಇದರಲ್ಲಿ ಪಾರ್ವತಿಯ ಯಜಮಾನರ ಸಹನೆ, ತಾಳ್ಮೆಯ ಪಾಲೂ ಇದೆ ಎನ್ನುವುದನ್ನು ಒಪ್ಪಲೇ ಬೇಕು. ಆತ ತುಂಬಾ ಸಮಾಧಾನಿ, ಎಂದೂ ತನ್ನ ಮಕ್ಕಳ ಬಗ್ಗೆಯಾಗಲೀ, ತನ್ನ 2ನೇ ಹೆಂಡತಿಯ ಬಗ್ಗೆ ಮಕ್ಕಳಿಗೆ ಇದ್ದ ಅಭಿಪ್ರಾಯವನ್ನಾಗಲೀ ಹೊರಪ್ರಪಂಚಕ್ಕೆ ತೆರೆದಿಡಲೇ ಇಲ್ಲ. ಹೆಚ್ಚೇಕೆ ಪಾರ್ವತಿಗೇ ಈ ಬಗ್ಗೆ ಆತ ತನ್ನ ಜೀವನದ ಕೊನೆವರೆಗೂ ತಿಳಿಸಲೇ ಇಲ್ಲ. ಪಾರ್ವತಿಗೆ ಇದೆಲ್ಲಾ ಮನವರಿಕೆಯಾದದ್ದು ಗಂಡ ಸತ್ತ ವರ್ಷಕ್ಕೆ ತನ್ನ ಗಂಡನ ವರ್ಷದ ತಿಥಿಯ ದಿನದಂದು ಮಕ್ಕಳು ಆಕೆಯನ್ನು ಒಬ್ಬಳನ್ನೇ ಅವಳ ಗಂಡನ ಮನೆಯಲ್ಲಿ ಬಿಟ್ಟು ಹೊರಟು ನಿಂತಾಗ. ಮಗ ಅನಿಸಿಕೊಂಡವನು "ನಮಗೆ ನೀವು ಮೊದಲಿನಿಂದ ಸರಿ ಬರಲೇ ಇಲ್ಲ, ಅಪ್ಪನಿಗೆ ಇದು ಗೊತ್ತಿತ್ತು, ಇನ್ನು ನೀವು ಸ್ವತಂತ್ರರು, ನೀವು ನಿಮ್ಮ ಗಂಡ ಕಟ್ಟಿದ ಮನೆಯಲ್ಲೇ ಇರಿ" ಅಂದಾಗ ಪಾರ್ವತಿಗೆ ದಿಕ್ಕೇ ತೋಚದಂತಾಗಿತ್ತು.

ಮಕ್ಕಳು ಈ ರೀತಿ ತನ್ನನ್ನೇಕೆ ಒಂಟಿಯಾಗಿ ಬಿಟ್ಟು ಬಿಟ್ಟರು?. ತಾನು ತಾಯಿಯಂತೆ ಎಲ್ಲಾ ಜವಾಬ್ದಾರಿ ಹೊರಲಿಲ್ಲವೇ? ಮಕ್ಕಳ ಮದುವೆಯನ್ನು ತಾನೇ ಮುಂದೆ ನಿಂತು ಮಾಡಿರಲಿಲ್ಲವೇ? ಇಬ್ಬರೂ ಹೆಣ್ಣು ಮಕ್ಕಳ ಎರಡೆರಡು ಬಾಣಂತನವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿದವಳು ಪಾರ್ವತಿ, ಬಾಣಂತನದ ಸಮಯ ತನ್ನ ಹೆಣ್ಮಕ್ಕಳು ಬಾಣಂತಿ ಸ್ನಾನ ನೀವೇ ಮಾಡಿಸಬೇಕು, ಕೆಲಸದ ಆಳುಗಳು ಯಾರೂ ನಮ್ಮನ್ನು ಸ್ನಾನ ಮಾಡಿಸಕೂಡದು ಎಂದು ಹೇಳಿದಾಗ ತಾನೇ ಸಂತೋಷದಿಂದ ಎಲ್ಲವನ್ನೂ ಒಪ್ಪಿ, ಅಪ್ಪಿ ತನ್ನ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಳು. ಬಾಣಂತನದ ಜವಾಬ್ದಾರಿ, ಮಗು ನೋಡಲು ಬರುವವರಿಗೆ ಹೊತ್ತು ಹೊತ್ತಿನ ಊಟ– ಉಪಚಾರವನ್ನು ನಿಭಾಯಿಸಿದ್ದಳು. ಅದಾವುದೂ ತನ್ನ ಹೆಣ್ಣು ಮಕ್ಕಳಿಗೆ ನೆನಪಿಗೆ ಬರಲಿಲ್ಲವೇ? ಎಂದು ಪಾರ್ವತಿಗೆ ಎಷ್ಟೋ ಬಾರಿ ಅನಿಸಿದ್ದುಂಟು. ಅದನ್ನು ತನ್ನ ಮನೆಗೆ ಬಂದವರಲ್ಲಿ ಎಲ್ಲರಲ್ಲಿಯೂ ಕೇಳಿದವಳೇ ಪಾರ್ವತಿ. ನಾನೇನು ತಪ್ಪು ಮಾಡಿದೆ? ಮಕ್ಕಳ ಮದುವೆ, ಬಾಣಂತನದ ಜವಾಬ್ದಾರಿ ನಿಭಾಯಿಸಿಲ್ಲವೇ? ಮೊಮ್ಮಕ್ಕಳು ಮನೆಗೆ ರಜೆಗೆ ಮನೆಗೆ ಬಂದಾಗ ಅವರ ಊಟ ಉಪಚಾರವನ್ನು ತುಂಬಾ ಅಕ್ಕರೆಯಿಂದ ನೋಡಿಕೊಂಡಿಲ್ಲವೇ? ಆದರೆ, ಅದನ್ನೆಲ್ಲಾ ನೆನಪಿಸಿಕೊಳ್ಳದೇ ಈಗ ಹೀಗೇಕೆ ತನ್ನನ್ನು ಇಲ್ಲಿ ಒಂಟಿಯಾಗಿ ಬಿಟ್ಟು, ತಮ್ಮ ಜವಾಬ್ದಾ–ರಿಯಿಂದ ನುಣುಚಿಕೊಂಡಿರುವುದು ಪಾರ್ವತಿಗೆ ಬಿಡಿಸಲಾಗದ ಕಗ್ಗಂಟಾಗಿ ಉಳಿದಿದೆ. ಎಲ್ಲಾ ಮಕ್ಕಳು ತಮ್ಮ ಜವಾಬ್ದಾರಿಗೆ ಬೆನ್ನು ತಿರುಗಿಸಿದರೂ, ಸಣ್ಣ ಅಳಿಯ ಒಬ್ಬ ಮಾತ್ರ ಮೊದಲಿಗೆ ವಾರಕ್ಕೊಮ್ಮೆ ಬರುತ್ತಿದ್ದವನು ನಂತರ ಹದಿನೈದು ದಿನಕ್ಕೊಂದು ಬಾರಿ ಬಂದು ನೋಡಿಕೊಂಡು ಹೋಗುತ್ತಿದ್ದ. ಬರುವಾಗ ಚೀಲ ತುಂಬಾ ಹಣ್ಣು, ತಿಂಡಿ, ತಿನಿಸು ತರುವುದನ್ನು ತಪ್ಪಿಸುತ್ತಿರಲಿಲ್ಲ. ಬಂದವನೇ ತನ್ನ ಕ್ಷೇಮ ಸಮಾಚಾರ ಕೇಳುತ್ತಿದ್ದ, ಉಪಚಾರಕ್ಕೆ ಇದ್ದ ದಾದಿಯರಲ್ಲಿ ತನ್ನ ಔಷಧದ ಬಗ್ಗೆ ತಿಳಿಸಿ ಹೇಳುತ್ತಿದ್ದ. 15 ದಿನಕ್ಕೊಮ್ಮೆ ಬರುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಆತ ಬರುವ ದಿನದಂದು ಪಾರ್ವತಿಯ ಕಾತುರ ಹೇಳಲಾಗದು. ದೂರದ ದೇಶದಲ್ಲಿ ಇದ್ದ ಮಗ ಫೋನಿನಲ್ಲಿ ಮಾತ್ರ ಮಾತನಾಡಲು ಸಿಗುತ್ತಿದ್ದ. ಬಾಯಿ ತುಂಬಾ ಮಾತನಾಡುವ ಪಾರ್ವತಿಗೆ ಮಗನ "ಹೂಂ" ಗುಟ್ಟುವಿಕೆಯಿಂದ ಆಕೆಯ ಮಾತುಗಳು ಹೊರಬಾರದೇ ಗಂಟಲಲ್ಲೇ ಉಳಿಯುತ್ತಿತ್ತು.

ಮಕ್ಕಳು ತನ್ನೊಬ್ಬಳನ್ನೇ ಮನೆಯಲ್ಲಿ ಬಿಟ್ಟು ಹೋದ ಹದಿನೈದೇ ದಿನಕ್ಕೆ ಪಾರ್ವತಿ ಅಸೌಖ್ಯದಿಂದ ಆಸ್ಪತ್ರೆ ಸೇರಿದವಳು, ಒಂದೂವರೆ ತಿಂಗಳು ಜೀವನ್ಮರಣದ ಹೋರಾಟ ನಡೆಸಿ, ನಂತರ ಗುಣಮುಖಳಾಗಿ ಆಸ್ಪತ್ರೆಯಿಂದ ಮನೆಗೆ ಹಿಂದಿರುಗಿ ಒಬ್ಬ ನರ್ಸ್ ಜೊತೆ ಮನೆಗೆ ಪಯಣ ಬೆಳೆಸಿದಳು. ಆನಂತರ, ಅವಳ ಒಡನಾಟ ಶುರುವಾಗಿದ್ದು ಹತ್ತು ಹಲವಾರು ನರ್ಸ್‌ಗಳ ಜೊತೆ. ಒಬ್ಬ ನರ್ಸ್ ರಜೆಗೆ ಹೋದಾಗ ಪಾಳಿಯಲ್ಲಿ ಇನ್ನೊಬ್ಬ ನರ್ಸ್ ಅವಳ ಉಪಚಾರಕ್ಕೆ ಬರುತ್ತಿದ್ದರು. ಎಲ್ಲರೂ ಜೀವನದಲ್ಲಿ ನೊಂದು ಬೆಂದವರೇ. ಒಬ್ಬಾಕೆ ನರ್ಸ್ ತುಂಬಾ ಅಚ್ಚುಮೆಚ್ಚು. ಎಷ್ಟು ಅಚ್ಚುಮೆಚ್ಚು ಎಂದರೆ ಆಕೆಯೇ ತನಗೆ ಕೊನೆವರೆಗೂ ಇದ್ದರೆ ಸಾಕೆಂಬ ಮಟ್ಟಿಗೆ. ಆದರೆ ವಿಧಿ ಇದನ್ನು ಸಹಿಸಲಿಲ್ಲ ಅನ್ನಬೇಕು. ಆಕೆ ಬಂದು ಆರು ತಿಂಗಳಿಗೆ ಆಕೆಯ ಗಂಡ ತೀವ್ರ ಅನಾರೋಗ್ಯಕ್ಕೆ ಒಳಗಾಗಿ ತೀರಿಹೋದ ಕಾರಣ ಆಕೆಗೆ ತನ್ನ ಊರಿಗೆ ಹೋಗದೆ ಬೇರೆ ವಿಧಿಯಿರಲಿಲ್ಲ. ಸಣ್ಣ ಮಕ್ಕಳು, ವಯಸ್ಸಾದ ತಾಯಿಯನ್ನು ಬಿಟ್ಟು ಆಕೆ ಹಿಂದಿರುಗಿ ಬರಲೇ ಇಲ್ಲ. ಪ್ರತಿ ತಿಂಗಳು ಒಬ್ಬರಾದ ನಂತರ ಒಬ್ಬ ನರ್ಸ್‌ಗಳು ಪಾಳಿಯಲ್ಲಿ ಬಂದು ಹೋಗುತ್ತಾರೆ. ಒಬ್ಬೊಬ್ಬ ನರ್ಸ್‌ಗಳ ಗುಣ ಒಂದೊಂದು ರೀತಿ– ವಾಚಾಳಿಗಳು, ಸಮಾಧಾನಿಗಳು, ಮಿತಭಾಷಿಗಳು, ಘಟವಾಣಿಗಳು. ಇವರ ನಡುವೆ ಒಗ್ಗಿಕೊಳ್ಳುವುದೇ ಪಾರ್ವತಿಗೆ ಬಲುದುಸ್ತರ. ಎಲ್ಲರೂ ಅವರ ಜೊತೆ ಅವರವರ ಮನೆ ತೊಂದರೆ, ತಾಪತ್ರಯಗಳನ್ನು ಹೊತ್ತು ಬಂದವರೇ... ಹೀಗೆ ನರ್ಸ್‌ಗಳ ಜೊತೆ ಆರಂಭಗೊಂಡ ಪಾರ್ವತಿಯ ದಿನಚರಿ ಮುಗಿದಿದ್ದು ಆಸ್ಪತ್ರೆಯಲ್ಲಿ. ನೆಪಕ್ಕೆ ಕೆಳಕ್ಕೆ ಬಿದ್ದ ಪಾರ್ವತಿಯ ತೊಡೆ ಮೂಳೆ ಮುರಿದು, ಆಸ್ಪತ್ರೆ ಸೇರಿದ 10 ದಿನಕ್ಕೇ ತನ್ನ ಇಹದ ಪಯಣ ಮುಗಿಸಿದಳು. ತನ್ನನ್ನು ಮಕ್ಕಳು ಒಂಟಿಯಾಗಿ ಮನೆಯಲ್ಲಿ ಬಿಟ್ಟಂದಿನಿಂದ ಪಾರ್ವತಿ "ತನಗೇಕೆ ಇನ್ನೂ ಸಾವು ಬಂದಿಲ್ಲ, ಸಾಯುವುದು ಹೇಗೆ?" ಎಂದು ಎಲ್ಲರಲ್ಲೂ ಕೇಳುತ್ತಿದ್ದಳು.

ದಿನವೂ ವರ್ತಮಾನ ಪತ್ರಿಕೆ ಓದುವುದು ಪಾರ್ವತಿಯ ದಿನಚರಿಗಳಲ್ಲಿ ಒಂದು. ಆಕೆ ಮೊದಲು ಓದುತ್ತಿದ್ದುದೇ ಶ್ರದ್ಧಾಂಜಲಿ ಅಂಕಣ. ಎಲ್ಲರೂ ಎಷ್ಟು ಸುಲಭದಲ್ಲಿ ಸಾಯುತ್ತಾರೆ. ನನಗೇಕೆ ಇನ್ನೂ ಸಾವು ಬಂದಿಲ್ಲ? ನಾನು ಹೇಗೆ ಸಾಯುವುದು? ನನ್ನನ್ನು ದೇವರು ಇನ್ನೂ ಏಕೆ ಇಟ್ಟಿದ್ದಾನೆ? ಎಂದು ಎಲ್ಲರಲ್ಲೂ ಕೇಳುವವಳು. ತನ್ನ ಮಕ್ಕಳಲ್ಲಿ ತನಗೇಕೆ ದಯಾಮರಣ ನೀಡಬಾರದು ಎಂದೂ ಕೇಳಿದ್ದುಂಟು. ಅವಳ ಮೊರೆ ಆ ದೇವರು ಕೇಳಿಸಿಕೊಂಡನೋ ಏನೋ? ತೊಡೆ ಮೂಳೆ ಮುರಿದಿದೆ ಎಂದು ಆಸ್ಪತ್ರೆ ಸೇರಿದ ಪಾರ್ವತಿ ಮರಳಿ ಬಾರದ ಲೋಕಕ್ಕೆ ಪಯಣ ಬೆಳೆಸಿದಳು. ತನ್ನ ಗಂಡನ ಹಣ, ತನ್ನಲ್ಲಿದ್ದ ಒಡವೆ, ತನ್ನ ಗಂಡನ ಆಸ್ತಿ ಎಲ್ಲವನ್ನೂ ತನ್ನ ಮಕ್ಕಳಿಗೆ ಬಿಟ್ಟು ಹೋದ ಪಾರ್ವತಿ ಇಂದು ನೆನಪು ಮಾತ್ರ. ಅವಳ ನೆನಪು ಮಕ್ಕಳಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಅವಳ ನಿಷ್ಕಾಮ ಪ್ರೇಮ, ಅಪಾರ ಪ್ರೀತಿ, ವಾತ್ಸಲ್ಯ ಎಲ್ಲಾ ನೆನಪು. ಪಾರ್ವತಿ ಈ ಲೋಕ ಬಿಟ್ಟು ಹೋದರೂ ತನ್ನ ನೆನಪನ್ನು ಮಾತ್ರ ಬಿಟ್ಟು ಹೋಗಿದ್ದಾಳೆ.

**– ಎಸ್. ಎಸ್. ವಿ. ರಾವ್.**

ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಮುಂಡಗೋಡ: ಹೆಚ್ಚಾದ ನಕಲಿ ಪತ್ರಕರ್ತರ ಹಾವಳಿ,

## ಗೋಮುಖ ವ್ಯಾಘ್ರಗಳಿಗೆ ಕಡಿವಾಣ ಹಾಕೋರು ಯಾರು?

**ಉತ್ತರ ಕನ್ನಡ /ಮುಂಡಗೋಡ :** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ, ಹೇಗೆ ದೇಶದ ಅಭ್ಯುದಯಕ್ಕಾಗಿ ಕೆಲಸ ಮಾಡುತ್ತವೆಯೋ, ಅದೇ ರೀತಿ ಪತ್ರಿಕಾರಂಗ ಕೂಡ ಸಮಾಜದಲ್ಲಿನ ಒಳಿತು ಹಾಗೂ ಕೆಡಕು, ದೇಶದ ಹಿತದೃಷ್ಟಿ ಸೇರಿದಂತೆ ಪ್ರತಿಯೊಂದು ವಿಷಯಗಳನ್ನು ಸಾರ್ವಜನಿಕವಾಗಿ ಪ್ರಜೆಗಳಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಆಡಳಿತ ಯಂತ್ರ ದಾರಿ ತಪ್ಪಿದಾಗ ಅದನ್ನು ಸರಿದಾರಿಗೆ ತರುವುದು, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಉತ್ತಮವಾಗಿ ಕೆಲಸ ಮಾಡಿದಾಗ ಪ್ರಶಂಸಿಸುವುದು, ಕೆಲಸ ಮಾಡದಿದ್ದಾಗ ಎಚ್ಚರಿಸುವುದು ಪತ್ರಿಕಾರಂಗದ ಆದ್ಯ ಕರ್ತವ್ಯವಾಗಿದೆ.







ಸಮಾಜದ ಒಳಿತಿಗೆ ಬಳಸಬೇಕಿದ್ದ "ಪತ್ರಿಕೆ" ಎಂಬ ಹರಿತ ಲೇಖನಿಯನ್ನು, ಮುಂಡಗೋಡದಲ್ಲಿ ಕೆಲವು ಮಂದಿ ನಕಲಿ ಪತ್ರಕರ್ತರು ಯೂಟ್ಯೂಬ್ ಚಾನೆಲ್ ,ಪತ್ರಿಕೆಗಳ ಹೆಸರುಗಳನ್ನು ವಾಮ ಮಾರ್ಗದಲ್ಲಿ ಸ್ವಹಿತ ಸಾಧನೆಗೆ ಬಳಸಿಕೊಳ್ಳುತ್ತಿರುವುದು ಪತ್ರಿಕಾರಂಗದ ದುರ್ದೈವ ವಾಗಿದೆ. ಪತ್ರಿಕೆ/ಯೂಟ್ಯೂಬ್ ಚಾನೆಲ್ ಗಳ ಹೆಸರು ಹೇಳಿಕೊಂಡು ಕಚೇ-ರಿಯಿಂದ ಕಚೇರಿ ತಿರುಗಾಡುವ ಈ ಚಾಲಾಕಿಗಳು ತಿಂಗಳಾದರೆ ಸಾಕು ಕಚೇರಿಗಳ ಮುಂದೆ, ಕೆಲವು ಸುರಪಾನ ಕೇಂದ್ರಗಳ ಮುಂದೆ , ತಿಂಗಳ ವಸೂಲಿಗೆ ಬಂದು ನಿಲ್ಲುತ್ತಿರುವುದು , ಕಂಡು ಸಾರ್ವಜನಿಕರು ಇವರೇನು ಅಸಲಿ ಪತ್ರಕರ್ತರೋ ಅಥವಾ ನಕಲಿ ಪತ್ರಕರ್ತರೋ ಎಂದು ವ್ಯಂಗ್ಯವಾಡುತ್ತಿದ್ದಾರೆ. ಇದರಿಂದ ಮುಂಡಗೋಡ ನಗರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಅಸಲಿ ಪತ್ರಕರ್ತರಿಗೆ ಸಾರ್ವಜನಿಕರ ಹೇಳಿಕೆಗಳು ಮುಜುಗರ ತರುತ್ತಿವೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು, ನಕಲಿ ಪತ್ರಕರ್ತರ ಅಥವಾ ಅವರ ಸಂಗಡಿಗರ ಯಾವುದೋ ಕೆಲಸವನ್ನು ಮಾಡಿಕೊಡಲಿಲ್ಲವೆಂದರೆ, ಕೇಳಿದಷ್ಟು ಹಣ ಕೊಡಲಿಲ್ಲ ಎಂದರೆ ಅಂತಹ ಅಧಿಕಾರಿಗಳನ್ನು  ಬ್ಲ್ಯಾಕ್ ಮೇಲ್ ಮಾಡುವ ಈ ನಕಲಿ ಪತ್ರಕರ್ತರು, ಪ್ರಾಮಾಣಿಕ ಅಧಿಕಾರಿಗಳ ವಿರುದ್ಧ ಹಿರಿಯ ಅಧಿಕಾರಿಗಳಿಗೆ ಸುಳ್ಳು ಮೂಗರ್ಜಿ ಹಾಕಿಸುವುದು ,ಅಂತಹ ಅಧಿಕಾರಿಗಳ ವಿರುದ್ಧ ಸುಳ್ಳು ಸುದ್ದಿ ಹಾಕಿಸುತ್ತೇನೆ ಎಂದು ಬೆದ-ರಿಸುವುದು ಕೂಡಾ ನಡೆದಿದ್ದು ,ಇದರಿಂದ ಮಾನಸಿಕವಾಗಿ ತೀವ್ರ ಕಿರುಕುಳ ಆಗುತ್ತಿದೆ ಎಂದು ಕೆಲ ಹೆಸರು ಹೇಳಲು ಇಚ್ಛಿಸದ ಅಧಿಕಾರಿಗಳು ತಮ್ಮ ವ್ಯಥೆಯನ್ನು "ಕರುನಾಡ ಕಂದ" ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ.
ಅದರಲ್ಲೂ ಕೆಲ ನಕಲಿ ಪತ್ರಕರ್ತರು ವಿವಿಧ  ಇಲಾಖೆಗಳಿಂದ ದಿನ ಬಳಕೆಗಾಗಿ ತಮ್ಮ ತಮ್ಮ ಮನೆಗಳಿಗೆ ಬೇಕಾಗಿರುವ ವಸ್ತುಗಳನ್ನು ಪ್ರತಿ ತಿಂಗಳು ತರಿಸಿಕೊಳ್ಳುತ್ತಿದ್ದಾರೆ ಎಂದೂ ಕೆಲವರು ಮಾಹಿತಿ ನೀಡಿದ್ದಾರೆ.

ಮುಂಡಗೋಡ ತಾಲೂಕಿಗೆ ಹೊಸದಾಗಿ ಬರುವ ಸರ್ಕಾರಿ ಅಧಿಕಾರಿಗಳು ಈ ನಕಲಿ ಪತ್ರಕರ್ತರಿಗೆ "ಜೀ ಹುಜೂರ್" ಅಂತ ಸಲಾಂ ಹೊಡೆಯುತ್ತಿರಲೇಬೇಕು, ಹಾಗೂ ವರ್ಷಕ್ಕೆ ಇಷ್ಟು ಅಂತ ಮಮೂಲಿ ಕೊಡಲೇಬೇಕೆಣಟಿಜಜಜಿಟಿಜಜ ಇಲ್ಲವಾದರೆ ಗೊಡ್ಡು ಬೆದರಿಕೆಗಳಿಗೆ ಸಲಾಂ ಹೊಡೆಯದ, ಮಾಮೂಲಿ ನೀಡದೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಅಧಿಕಾರಿ ವರ್ಗದವರನ್ನು ಟಾರ್ಗೆಟ್ ಮಾಡುವ ಈ 'ನಕಲಿ ಪತ್ರಕರ್ತರು' ಮೂರನೇ ವ್ಯಕ್ತಿಗಳ ಕೈಯಲ್ಲಿ ಅಂತಹ ಕಚೇರಿಗಳಿಗೆ ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿ ಸಲ್ಲಿಸಿ ಅಧಿಕಾರಿಗಳನ್ನು ಬೆದರಿಸುವ ಹಾಗೂ ಬ್ಲಾಕ್ ಮೇಲ್ ಮಾಡುತ್ತಾ ಹಣ ಪೀಕುವ ದಂಧೆಗೆ ಕೈ ಹಾಕಿ ದರ್ಪ ಮೆರೆಯುತ್ತಿದ್ದಾರೆ. ಇಂತಹ ಕಳ್ಳ ಬೆಕ್ಕುಗಳಿಗೆ ಗಂಟೆ ಕಟ್ಟುವವರು ಯಾರು ಎಂಬ ಪ್ರಶ್ನೆ  ಅಧಿಕಾರಿಗಳು ಹಾಗೂ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ...

### ಅಸಲಿ ಹಾಗೂ ನಕಲಿ ಪತ್ರಕರ್ತ ಎಂದರೆ ಯಾರು?

ಯಾವುದೇ ಮಾನ್ಯತೆ ಪಡೆಯದ ಪತ್ರಿಕೆ ಅಥವಾ ಪ್ರತಿಷ್ಠಿತ ಪತ್ರಿಕೆಗಳ, ಮಾಧ್ಯಮ ಸಂಸ್ಥೆಗಳ ನಕಲಿ ಅಥವಾ ಅವಧಿ ಮುಗಿದ ಗುರುತಿನ ಚೀಟಿ ಇಟ್ಟುಕೊಂಡು ಕಚೇರಿ ಕಚೇರಿ ತಿರುಗುವುದು, ಅಧಿಕಾರಿಗಳನ್ನು ಬ್ಲ್ಯಾಕ್ ಮೇಲ್ ಮಾಡುವವರನ್ನು ಸಾಮಾನ್ಯವಾಗಿ ನಕಲಿ ಪತ್ರಕರ್ತ ಎನ್ನಲಾಗುತ್ತದೆ. ಇನ್ನೂ ಕೆಲವೆಡೆ ರಾಜ್ಯಾದ್ಯಂತ ಇರುವ ನೂರಾರು ಪತ್ರಕರ್ತರ ಸಂಘಗಳ ಪೈಕಿ, ಕೆಲವು ಪತ್ರಕರ್ತರ ಸಂಘಗಳ ಬೆಂಬಲದೊಂದಿಗೆ ಪತ್ರಿಕೆ/ ಮಾಧ್ಯಮ ಸಂಸ್ಥೆಯ ಗುರುತಿನ ಚೀಟಿ ಇಲ್ಲದಿದ್ದರೂ ಪತ್ರಕರ್ತರ ಸಂಘದ ಐಡಿ ಮಾಡಿಕೊಂಡು ,ತಮ್ಮ ಚಾಲಾಕಿತನದಿಂದ ಹೇಳಿಕೊಳ್ಳಲು ಒಂದು ಸದಸ್ಯತ್ವ/ ಹೋಬಳಿ/ ತಾಲ್ಲೂಕು ಅಧ್ಯಕ್ಷ ಹುದ್ದೆ ಗಿಟ್ಟಿಸಿಕೊಂಡು ಅಟ್ಟಹಾಸ ಮೆರೆಯುವವರೂ ಇದ್ದಾರೆ.

ಮುಂಡಗೋಡ ನಗರದಲ್ಲಿ ಯಾವುದೇ ಕಾಮಗಾರಿ ಗಳಾಗಲಿ ಮಾಹಿತಿ ಹಕ್ಕಿನಲ್ಲಿ ಅರ್ಜಿ ಸಲ್ಲಿಸಿ ಬ್ಲಾಕ್ ಮೇಲ್ ಮಾಡುವ ನಕಲಿ ಪತ್ರಕರ್ತರು , ಇಂತಿಷ್ಟು ಅಂತ ಅಲ್ಲಿ ಕೂಡಾ ಮಾರ್ಜಿನ್ ಫಿಕ್ಸ್ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಮುಂಡಗೋಡ ನಗರದಲ್ಲಿ ಎಲ್ಲೇ ಗಲಾಟೆಗಳು ಆಗಲಿ, ರಾಜಿ ಮಧ್ಯಸ್ಥಿಕೆ ಮಾಡುವ ನೆಪದಲ್ಲಿ ಬರುವ ನಕಲಿ ಪತ್ರಕರ್ತರನ್ನು ನಿಯಂತ್ರಿಸುವ ಕೆಲಸ ನಡೆಯಬೇಕಿದೆ. ಇಲಾಖೆಗಳು ಮಾತ್ರವಲ್ಲ ಟೀ ಪಾಯಿಂಟ್, ಹೋಟೆಲ್, ರೆಸ್ಟೋರೆಂಟ್, ಡಾಬಾ, ಹೀಗೆ ಇವರ ಅಂಧಾ ದರ್ಬಾರ್ ಇಲ್ಲದ ಜಾಗವೇ ಇಲ್ಲವೇನೋ ಎನ್ನುವಷ್ಟು ಆವರಿಸಿಕೊಂಡಿದ್ದಾರೆ.

### ಪ್ರಾಮಾಣಿಕ ಪತ್ರಕರ್ತರ ಮೇಲೆ ಪರಿಣಾಮ?

ತಮ್ಮ ವಾಹನಗಳ ಮೇಲೆ ಪ್ರೆಸ್ ಸ್ಟಿಕ್ಕರ್ ಬಳಸಿಕೊಂಡು , ಪೋಸು ಕೊಡುವ ಪತ್ರಕರ್ತರು ತಾವೊಬ್ಬ ಅವತಾರ ಪುರುಷ, ತನ್ನನ್ನು ಬಿಟ್ಟರೆ ಮುಂಡಗೋಡದಲ್ಲಿ ಯಾರೂ ದೊಡ್ಡವರಲ್ಲ ಎಂಬ ರೀತಿಯಲ್ಲಿ ಅಧಿಕಾರಿಗಳ ಮುಂದೆ ಪೋಸ್ ಕೊಟ್ಟು ಹವಾ ಮೆಂಟೇನ್ ಮಾಡುತ್ತಿದ್ದಾರೆ ಎಂಬುದು ಕೆಲ ಅಧಿಕಾರಿಗಳ ಅಭಿಪ್ರಾಯವಾಗಿದೆ. ಯಾವುದೇ ಸಭೆ ಸಮಾರಂಭಗಳಾಗಲಿ ಮೊದಲ ಸಾಲಿನಲ್ಲಿ ಬಂದು ಕುಳಿತುಕೊಳ್ಳುವ ಕೆಲ ನಕಲಿ ಪತ್ರಕರ್ತರು, ಅಸಲಿ ಪತ್ರಕರ್ತರನ್ನು ಕೇರ್ ಮಾಡದೆ ಪ್ರತಿ ಸಭೆ ಸಮಾರಂಭ ನಡೆಯುವಲ್ಲಿ ಹಾಜರಾಗುತ್ತಿದ್ದಾರೆ. ಇಂತಹವರನ್ನು ತಾಲೂಕ ಆಡಳಿತ ಗುರುತಿಸಿ ಎಚ್ಚರಿಸಿ ಕಾನೂನು ಕ್ರಮ ಕೈಗೊಳ್ಳುವ ಕೆಲಸ ಆಗಬೇಕು, ಅದೇ ರೀತಿ ಮುಂಡಗೋಡದಲ್ಲಿ ಯಾವುದೇ ಪತ್ರಿಕೆಗಳಲ್ಲಿ ಕೆಲಸ ಮಾಡದಿದ್ದರೂ ವಾಹನಗಳ ಮೇಲೆ ಪ್ರೆಸ್ ಅಂತ ಲೇಬಲ್ ಹಾಕಿಕೊಂಡು ತಿರುಗಾಡುವ ನಕಲಿ ಪತ್ರಕರ್ತರನ್ನು ಹಿಡಿದು ಎಚ್ಚರಿಸುವ ಕೆಲಸವನ್ನು ಮುಂಡಗೋಡ ಪೊಲೀಸರು ಆದ್ಯತೆಯ ಮೇಲೆ ಮಾಡಬೇಕಿದೆ.

ಒಟ್ಟಿನಲ್ಲಿ ಮುಂಡಗೋಡದಲ್ಲಿ ಹೊಸ ತಲೆನೋವಿಗೆ ಕಾರಣರಾಗಿರುವ ಬ್ಲ್ಯಾಕ್ ಮೇಲ್ ಮಾಡುವ ನಕಲಿ ಪತ್ರಕರ್ತರಿಂದ ಪ್ರಾಮಾಣಿಕವಾಗಿ, ಕೆಲಸ ಮಾಡುತ್ತಿರುವ ಸಮಾಜಮುಖಿ ಪತ್ರಕರ್ತರಿಗೆ ಸಹಜವಾಗಿ ಇರುಸು ಮುರುಸು ಆಗುತ್ತಿದೆ.

### ನಕಲಿಗಳಿಗೆ ಸಾಥ್ ನೀಡುವ ಕೆಲವು ಅಧಿಕಾರಿಗಳು ?

ಕೆಲ ಇಲಾಖೆಗಳಲ್ಲಿನ ಭ್ರಷ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಕಲಿ ಪತ್ರಕರ್ತರ ಜೊತೆ ಶಾಮೀಲಾಗಿ ಅವರುಗಳ ಇಲಾಖೆಯ ಭ್ರಷ್ಟಾಚಾರ ,ಕರ್ಮಕಾಂಡಗಳ ಕುರಿತು ಮಾಹಿತಿ ಕಲೆ ಹಾಕುವ ಪ್ರಾಮಾಣಿಕ ಪತ್ರಕರ್ತರ ಮೇಲೆ ಹಣದ ಆಮಿಷವೊಡ್ಡಿ ಟ್ರ್ಯಾಪ್ ಮಾಡಲು ಯತ್ನಿಸಿದ್ದು , ಇದರಿಂದ ಎಚ್ಚೆತ್ತ ಕೆಲ ಪತ್ರಕರ್ತರು ಆಯಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಬಳಿ ಈಗಾಗಲೇ ದೂರು ನೀಡಿದ್ದಾರೆ. ಇದು ಹೀಗೆಯೇ ಮಿತಿ ಮೀರಿದರೆ ಸಾರ್ವಜನಿಕವಾಗಿ ಆ ನಕಲಿ ಪತ್ರಕರ್ತರ ಹಾಗೂ ಕೆಲ ಭ್ರಷ್ಟ ಅಧಿಕಾರಿಗಳ ಬಣ್ಣ ಬಯಲು ಮಾಡಬೇಕಾದೀತು ಎಂದು ತಾಲ್ಲೂಕಿನ ಕೆಲ ಪತ್ರಕರ್ತರು ಎಚ್ಚರಿಕೆಯನ್ನೂ ನೀಡಿದ್ದಾರೆ.

ಪರೋಕ್ಷವಾಗಿ ಕೆಲ ಇಲಾಖೆಗಳನ್ನು ಟಾರ್ಗೆಟ್ ಮಾಡುವ ನಕಲಿ ಪತ್ರಕರ್ತರು ಕಂಡಕಂಡವರಿಂದ ಮೂಗರ್ಜಿ ಹಾಕಿಸಿ ,ನಿಮ್ಮ ಇಲಾಖೆಯಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ ಎಂದು ಪತ್ರ ಬರೆಯಿಸಿ, ಮಾನಸಿಕ ಕಿರುಕುಳ ನೀಡುತ್ತಿದ್ದು, ನಮ್ಮ ತಾಳ್ಮೆಗೂ ಮಿತಿ ಇದೆ, ಮಿತಿ ಮೀರಿದರೆ ಅಂತಹ ನಕಲಿ ಪತ್ರಕರ್ತರ ವಿರುದ್ಧ ಶೀಘ್ರದಲ್ಲೇ ಪೊಲೀಸ್ ಠಾಣೆಗೆ ದೂರು ದಾಖಲು ನೀಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಆರ್ಎನ್ಐ ನಿಂದ ಮಾನ್ಯತೆ ಪಡೆದ ಪತ್ರಿಕೆ , ಸ್ಯಾಟಲೈಟ್ ಚಾನೆಲ್ ಗಳ ಹಾಗೂ ನೋಂದಣಿ ಪಡೆದ ಮಾಧ್ಯಮ ಸಂಸ್ಥೆಗಳ ಗುರುತಿನ ಚೀಟಿ ಹೊಂದಿರುವವರನ್ನು ಮಾತ್ರ ಪತ್ರಕರ್ತ ಎಂದು ಪರಿಗಣಿಸಲಾಗುತ್ತದೆ. ಅದನ್ನು ಬಿಟ್ಟು ನಾನೂ ಪತ್ರಕರ್ತ ಅಂತ ಸ್ಟಿಕ್ಕರ್ ಹಾಕಿಕೊಂಡರೆ, ಯಾರೋ ಮಾಡಿದ ಪತ್ರಿಕೆಯ ವರದಿಯನ್ನೇ ತನ್ನ ವರದಿ ಎಂಬಂತೆ ಪೋಸ್ ಕೊಡುವ ನಕಲಿ ಪತ್ರಕರ್ತರನ್ನು ನಿಯಂತ್ರಿಸದಿದ್ದರೆ ಮುಂದೊಂದು ದಿನ ಇವರುಗಳು ಮಾಡುವ ತಪ್ಪಿಗೆ ಪ್ರಾಮಾಣಿಕ ಪತ್ರಕರ್ತರು ನಗೆಪಾಟಲಿಗೆ ಈಡಾಗಿ, ನಿಷ್ಠಾವಂತ ಅಧಿಕಾರಿಗಳು ವರ್ಗಾವಣೆಯಾಗಿ ಸಾರ್ವಜನಿಕರಿಗೆ ಇದರ ಪರಿಣಾಮ ಎದು-ರಿಸುವ ದಿನಗಳು ದೂರವಿಲ್ಲ ಎನಿಸುತ್ತದೆ. ಒಟ್ಟಿನಲ್ಲಿ ತಾವು ಆಡಿದ್ದೇ ಆಟ , ಬರೆದಿದ್ದೆ ವೇದ ವಾಕ್ಯ ಎಂಬಂತಿರುವ ನಕಲಿ ಪತ್ರಕರ್ತರನ್ನು ನಿಯಂತ್ರಿಸಬೇಕಿದೆ ಇಲ್ಲವಾದಲ್ಲಿ ಸಮಾಜಕ್ಕಾಗಿ ಕೆಲಸ ಮಾಡುವ ಪತ್ರಕರ್ತರು ಅಪಹಾಸ್ಯಕ್ಕೆ ಈಡಾಗುವ ದಿನಗಳು ದೂರವಿಲ್ಲ.

### ಮುನ್ನೆಚ್ಚರಿಕೆ ಅಥವಾ ಸದ್ಯಕ್ಕಿರೋ ಪರಿಹಾರ

ಯಾವುದೇ ಅಧಿಕಾರಿಗಳು ಒಬ್ಬ ವರದಿಗಾರ ಅಥವಾ ಪತ್ರಕರ್ತ ತಮ್ಮ ಬಳಿ ಯಾವುದೇ ಪತ್ರಿಕೆ ಅಥವಾ ಮಾಧ್ಯಮ ಸಂಸ್ಥೆಯ ಹೆಸರು ಹೇಳಿಕೊಂಡು ಬಂದರೆ ಅವರ ಗುರುತಿನ ಚೀಟಿಯನ್ನು ಒಮ್ಮೆ ಪರಿಶೀಲಿಸಿ ಸರಿ ಇದ್ದಲ್ಲಿ ಅವಶ್ಯಕತೆ ಇರುವ ಸ್ಪಂದನೆ ನೀಡುವುದರೊಂದಿಗೆ ಅನುಮಾನ ಬಂದಲ್ಲಿ ತಮ್ಮ ಮೇಲಾಧಿಕಾರಿಗಳ, ಸ್ಥಳೀಯ ಪೊಲಿಸ್ ಠಾಣೆ, ತಾಲ್ಲೂಕಿನಲ್ಲಿರುವ ಪತ್ರಕರ್ತರ ಸಂಘ ಅಥವಾ ತಮ್ಮ ಸಂಪರ್ಕದಲ್ಲಿರುವ ಅಸಲಿ ಪತ್ರಕರ್ತರನ್ನು ಸಂಪರ್ಕಿಸಿ ನಕಲಿ ಎಂದು ರುಜುವಾತಾದಲ್ಲಿ ಕಾನೂನು ಕ್ರಮ ಕೈಗೊಳ್ಳಲು ಕೂಡಾ ಹಿಂಜರಿಯಬಾರದು ಹಾಗಾದಾಗ ಮಾತ್ರ ಇಂತಹ ನಾಯಿಕೊಡೆಗಳಂತೆ ಎದ್ದು ನಿಂತಿರುವ ನಕಲಿಗಳನ್ನು ಮಟ್ಟ ಹಾಕುವ ಮೂಲಕ ರಾಜ್ಯದ ಇತರೆ ತಾಲ್ಲೂಕು, ಜಿಲ್ಲೆಗಳಲ್ಲಿ ಇರುವ ಇಂಥವರಿಗೆ ಎಚ್ಚರಿಕೆ ಗಂಟೆ ಬಾರಿಸುವತ್ತ ಇಲಾಖೆಗಳು ಗಮನ ಹರಿಸಬೇಕಿದೆ.

**– ಕರುನಾಡ ಕಂದ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಜಾನಪದ ಉತ್ಸವದಿಂದ ಸಾಂಸ್ಕೃತಿಕ ನಗರಿಯಾದ ಮುಂಡಗೋಡ



ಉತ್ತರ ಕನ್ನಡ: ಮುಂಡಗೋಡ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತನ್ನ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಎರಡು ದಿನಗಳ ಜಾನಪದ ಉತ್ಸವ ಯಶಸ್ವಿಯಾಗಿ ಸಮಾರೋಪಗೊಂಡು ಮುಂಡಗೋಡ ವನ್ನು ಸಾಂಸ್ಕೃತಿಕ ನಗರಿ ಎಂಬ ನೂತನ ದೃಷ್ಟಿಕೋನದಿಂದ ನೋಡುವಂತೆ ಮಾಡಿದೆ.

ಏಪ್ರಿಲ್ 22 ಮತ್ತು 23 ರಂದು ನಡೆದ ಎರಡು ದಿನಗಳ ಕಾರ್ಯಕ್ರಮ ಕಾಲೇಜು ವಿದ್ಯಾರ್ಥಿಗಳ ಮನದಾಳದಲ್ಲಿ ಸಂಸ್ಕೃತಿ, ಆಚಾರ, ವಿಚಾರಗಳ ಕುರಿತು ಭದ್ರ ಬುನಾದಿ ಹಾಕಿಕೊಟ್ಟಿದೆ. ಮೊದಲ ದಿನ ನಗರದ ಪ್ರವಾಸಿ ಮಂದಿರದಿಂದ ವಿದ್ಯಾರ್ಥಿಗಳ ಪೂರ್ಣ ಕುಂಭ ಮೆರವಣಿಗೆ ಮತ್ತು ವಿಶೇಷವಾಗಿ ಅಲಂಕೃತವಾಗಿದ್ದ ತಾಲೂಕಿನ ಹೆಸರಾಂತ ಹೋರಿಗಳು ಹಾಗೂ ಡೊಳ್ಳು ಕುಣಿತಗಳ ತಂಡಗಳಿದ್ದ ಆಕರ್ಷಕ ಜಾಥಾಗೆ ಯಲ್ಲಾಪುರ – ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಶಿವರಾಮ್ ಹೆಬ್ಬಾರ್ ಅವರು ಡೋಲು ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದ ಅವರು ಮನೆಯಲ್ಲಿ ಅಮ್ಮ ಹಾಕಿಕೊಟ್ಟ ಸಂಸ್ಕೃತಿ ವಿದ್ಯಾರ್ಥಿಗಳ ವೇಷ ಭೂಷಣದಲ್ಲಿ ಕಾಣುತ್ತಿದೆ. ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸ ಮಾಡಿ ಎಂದು ಕಾರ್ಯಕ್ರಮದ ಬಗ್ಗೆ ಶುಭ ಕೋರಿದರು. ಬಳಿಕ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಆಕರ್ಷಕ ಜಾಥಾ ಮುಂಡಗೋಡ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ವ್ಯಾಪಕ ಮೆಚ್ಚುಗೆ ಪಡೆಯಿತು.

ಜಾನಪದ ಉತ್ಸವ ಕುರಿತು ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಶಾಂತಾರಾಮ್ ಸಿದ್ದಿ ಅವರು ಸಂಸ್ಕೃತಿ ಆಚಾರ ವಿಚಾರಗಳನ್ನೇ ಜನಪದ ಎನ್ನುತ್ತೇವೆ. ಇದನ್ನೇ ಹಳ್ಳಿಯ ಸೊಗಡು ಎನ್ನುತ್ತೇವೆ ಅದನ್ನು ಅನುಭವಿಸಿದವರಿಗೆ ಗೊತ್ತು ಜನಪದ ತಾಕತ್ತು. ಅಂತಹ ಸಂಸ್ಕೃತಿಯನ್ನು ವಿದ್ಯಾರ್ಥಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಿಜಕ್ಕೂ ಜಾನಪದ ಉತ್ಸವದಲ್ಲಿ ವಿದ್ಯಾರ್ಥಿಗಳ ಧರಿಸಿರುವ ಪೋಷಾಕು ನಮ್ಮ ಸಂಸ್ಕೃತಿಯ ನೈಜ ಅನಾವರಣ ಮಾಡಿದೆ. ಮುಂಡಗೋಡ ನಗರಕ್ಕೆ ಹೊಸ ಕಳೆ ತಂದುಕೊಟ್ಟಿದೆ ,ಇಂತಹ ಕಾರ್ಯಕ್ರಮಗಳಿಂದ ಅಂತರಾಳದ ಮನಸ್ಥಿತಿಗೆ ನೆಮ್ಮದಿ ಸಿಗಲಿದೆ ಎಂದರು.

ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಎಲ್ ಟಿ ಪಾಟೀಲ್ ಮಾತನಾಡಿ ಜನಪದಕ್ಕೆ ಭಾರಿ ಇತಿಹಾಸವಿದೆ. ಮುಂಡಗೋಡ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಜಾನಪದ ಉತ್ಸವ ನಮಗೆ ಅತೀವ ಸಂತಸ ತಂದಿದ್ದು, ಪ್ರತಿವರ್ಷವೂ ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು, ವಿದ್ಯಾರ್ಥಿಗಳಲ್ಲಿ ಜಾನಪದ, ಸಾಂಸ್ಕೃತಿಕ ವಿಚಾರಧಾರೆಗಳನ್ನು ಜೀವಂತವಾಗಿಡುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮ ಫಲಕಾರಿಯಾಗಲಿದೆ ಎಂದರು.

ಇದೇ ವೇಳೆ ಉಪಸ್ಥಿತರಿದ್ದ ಮುಂಡಗೋಡ ಪೊಲೀಸ್ ಠಾಣೆಯ ಪಿಎಸ್ಐ ಪರಶುರಾಮ್ ತಾವು ವಿದ್ಯಾರ್ಥಿ ಜೀವನದಲ್ಲಿದ್ದಾಗ ಇಂತಹ ಕಾರ್ಯಕ್ರಮಗಳನ್ನು ಶಾಲಾ ಕಾಲೇಜುಗಳಲ್ಲಿ ಆಯೋಜಿಸುತ್ತಿದ್ದರ ಬಗ್ಗೆ ಹಾಗೂ ಜನಪದ ಸಾಹಿತ್ಯ ಸಂಸ್ಕೃತಿ ಅನ್ನುವುದು ನಮ್ಮ ಜೀವನದಲ್ಲಿ ಎಷ್ಟು ಹಾಸು ಹೊಕ್ಕಾಗಿದೆ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಸಾಮಾಜಿಕ ಹೋರಾಟಗಾರ ಬಸವರಾಜ್ ಸಂಗಮೇಶ್ವರ ಜಾನಪದ ಸಾಹಿತ್ಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮೊದಲು ಪದವಿ ಕಾಲೇಜಿನ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ಚಿತ್ರಿಸಿದ್ದ ವರ್ಲಿ ಕಲೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ ಅತಿಥಿಗಳು ವಿದ್ಯಾರ್ಥಿಗಳ ಕೌಶಲ್ಯ ಅತ್ಯುತ್ತಮವಾಗಿದೆ ಎಂದು ಬಣ್ಣಿಸಿದರು. ಹಳ್ಳಿ ಪರಂಪರೆ , ದೀಪಾವಳಿ ಹಬ್ಬ, ಸಂಕ್ರಾಂತಿ, ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ನಡೆದುಕೊಂಡು ಬಂದ ಜಾನಪದ ಸಂಸ್ಕೃತಿಯನ್ನು ವಿದ್ಯಾರ್ಥಿಗಳು ತಂಡ ತಂಡವಾಗಿ ಕಾಲೇಜಿನ ಆವರಣದಲ್ಲಿ ಕಲಾಕೃತಿ ಮೂಲಕ ಸ್ಮರಿಸುವ ಕೆಲಸ ಮಾಡಿದರು. ಅದರಲ್ಲೂ ಮಧುವಣಗಿತ್ತಿಯಂತೆ ಅಲಂಕೃತ ಗೊಂಡಿದ್ದ ಹೋರಿಗಳು ಭಾರೀ ಜನಾಕರ್ಷಣೆ ಪಡೆದಿದ್ದವು.

ವಿದ್ಯಾರ್ಥಿಗಳ ಜೊತೆಗೆ ತಾವು ಏನೂ ಕಡಿಮೆ ಇಲ್ಲ ಎಂಬಂತೆ ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚಿದ ಅಧ್ಯಾಪಕ ವರ್ಗವನ್ನು ಕಂಡ ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು. ಇದೇ ವೇಳೆ ಜಾನಪದ ಉತ್ಸವ ಕುರಿತು ಮಾತನಾಡಿದ ಕಾಲೇಜಿನ ವಿದ್ಯಾರ್ಥಿಗಳು ಕೇವಲ ಪಠ್ಯ ಚಟುವಟಿಕೆಗಳ ಮೂಲಕ ಕಾಲೇಜು ಜೀವನ ಮುಗಿದು ಹೋಗಿಬಿಡುತ್ತದೆ, ಇಂತಹ ಕಾರ್ಯಕ್ರಮಗಳ ಆಯೋಜನೆ ಮೂಲಕ ವಿದ್ಯಾರ್ಥಿಗಳಲ್ಲಿ ಸಂಸ್ಕೃತಿ ಸಾಹಿತ್ಯ, ಆಚಾರ



ವಿಚಾರಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವಾಗಿ ಜೀವನ ಪರ್ಯಂತ ನೆನಪಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಾನಪದ ಉತ್ಸವ ಮೂಲಕ ಮುಂಡಗೋಡ ನಗರದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಹೊಸ ಮೆರುಗು ತಂದು ಕೊಟ್ಟ ಪ್ರಾಂಶುಪಾಲ ಪ್ರಸನ್ನ ಸಿಂಗ್ ಹಜೇರಿ ಹಾಗೂ ಅವರ ನೇತೃತ್ವದ ತಂಡದ ಶ್ರಮದಿಂದ ಜಾನಪದ ಉತ್ಸವ ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು, ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ಅನಂತ ಧನ್ಯವಾದ ತಿಳಿಸಿದ ಅವರು ವಿದ್ಯಾರ್ಥಿಗಳ ಹಿತಕ್ಕೆ ಅವರಲ್ಲಿ ಸಂಸ್ಕೃತಿ ಉಳಿಸಿ ಬೆಳೆಸಲು ಇಂತಹ ಕಾರ್ಯಕ್ರಮ ಅನುಕೂಲ ಎಂದರು. ಒಟ್ಟಿನಲ್ಲಿ ಪ್ರಥಮ ದರ್ಜೆ ಕಾಲೇಜಿನ ಜಾನಪದ ಉತ್ಸವದ ಮೂಲಕ ಮುಂಡಗೋಡ ಸಾಂಸ್ಕೃತಿಕ ನಗರಿ ಎಂದೆನಿಸಿಕೊಂಡಿದೆ ಎಂದರೂ ಅತಿಶಯೋಕ್ತಿ ಎನಿಸುವುದಿಲ್ಲ.

**ವರದಿ-ಶಿವರಾಜ್ ಶಿರಾಲಿ**

# ಉತ್ತಮ ದೇಶ ಕಟ್ಟಲು ಉತ್ತಮ ಶಿಕ್ಷಣ ಸಂಸ್ಥೆ ಮುಖ್ಯ: ಮಹಿಬೂಬ್ ಎ.ಐ

**ಕಲಬುರಗಿ/ಯಡ್ರಾಮಿ** : ಮದರ್ ತೆರೇಸಾ ಶಿಕ್ಷಣ ಟ್ರಸ್ಟ್(ರಿ.) ಇಜೇರಿ ಇದರ ಅಡಿಯಲ್ಲಿ ನಡೆಯುತ್ತಿರುವ ರಾಯಲ್ ಪಬ್ಲಿಕ್ ಇಂಗ್ಲೀಷ್ ಮತ್ತು ಕನ್ನಡ ಪೂರ್ವ ಪ್ರಾಥಮಿಕ ಶಾಲೆಯ 2022-2023 ಸಾಲಿನಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದು ಸತತವಾಗಿ ಎರಡು ವರ್ಷಗಳ ಕಾಲ ಗುಣ ಮಟ್ಟದ ಶಿಕ್ಷಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಕಲಿಕೆಗೆ ಉತ್ತಮವಾದ ವಾತಾವರಣ ನಿರ್ಮಾಣ ಮಾಡಿರುವುದು ಸಂತಸದ ಸುದ್ದಿಯಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರು ಅಭಿಮತ ಪಟ್ಟರು.




ಪ್ರತಿಯೊಬ್ಬ ವಿದ್ಯಾರ್ಥಿಗೂ ವೈಯಕ್ತಿಕ ಕಾಳಜಿ ವಹಿಸುವಲ್ಲಿ ಸ್ವತಃ ಸಂಸ್ಥೆಯ ಅಧ್ಯಕ್ಷರು, ಶಾಲೆಯ ಮುಖ್ಯ ಗುರುಗಳು ಹಾಗೂ ಸಿಬ್ಬಂದಿ ವರ್ಗದವರು ಶ್ರಮ ವಹಿಸುತ್ತಿದ್ದಾರೆ. ನಮ್ಮ ಶಾಲೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ತರಬೇತಿ ನೀಡುತ್ತಿದ್ದೇವೆ. ಅದೇ ರೀತಿಯಾಗಿ ಶಿಸ್ತು ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ಕೊಡುತ್ತಿದ್ದೇವೆ ವಾರಕ್ಕೊಮ್ಮೆ ಕಿರುಪರೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕಾ ನ್ಯೂನ್ಯತೆಗಳನ್ನು ಗುರ್ತಿಸಿ ವಿವಿಧ ಕೌಶಲ್ಯಗಳನ್ನು ಬಳಸಿ ವಿದ್ಯಾರ್ಥಿಗಳ ಆಳಕ್ಕೆ ಬೋಧನಾ ಪ್ರಕ್ರಿಯೆಯಲ್ಲಿ ಇಳಿಯುತ್ತೇವೆ ಅದೇ ರೀತಿಯಾಗಿ ಪ್ರತಿ ಶನಿವಾರಕೊಮ್ಮೆ ಆರೋಗ್ಯ ತಪಾಸಣೆ ಹಾಗೂ ಪ್ರತಿ ತಿಂಗಳ ಎರಡನೇ ಶನಿವಾರ ದಂದು ಪಾಲಕರ ಮತ್ತು ಶಿಕ್ಷಕರ ಸಭೆ ಕರೆಯಲಾಗುವುದು ಜೊತೆಗೆ ಶಾಲೆಯಲ್ಲಿ ಕ್ರೀಡಾ ದಿನ ಹಾಗೂ ವಿಜ್ಞಾನ ಮೇಳ, ಕಲಿಕಾ ಮೇಳ ಹಾಗೂ ಕಲಿಕಾ ಹಬ್ಬ ಇನ್ನಿತರ ಮಕ್ಕಳ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವಲ್ಲಿ ನಮ್ಮ ಸಂಸ್ಥೆ ಶ್ರಮ ಪಡುತ್ತಿದೆ ಆದ ಕಾರಣ ತಮ್ಮ ಎಲ್ಲಾ ಪಾಲಕರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ 2025-2026 ನೇ ಸಾಲಿನ ಪ್ರವೇಶಗಳು ಪ್ರಾರಂಭವಾಗಿವೆ ಆದ ಕಾರಣ ರಾಯಲ್ ಪಬ್ಲಿಕ್ ಶಾಲೆಗೆ ಭೇಟಿ ಕೊಟ್ಟು ತಮ್ಮ ಮಕ್ಕಳನ್ನು ದಾಖಲಾತಿಯನ್ನು ನೊಂದಾಯಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ

ರಾಯಲ್ ಪಬ್ಲಿಕ್ ಶಾಲೆಯ ಅಧ್ಯಕ್ಷರು, ಇಜೇರಿ
:ಮಹಿಬೂಬ್ ಎ.ಐ
(ಎಮ್.ಎ, ಬಿ.ಈಡಿ, ಡಿ.ಈಡಿ.)
ಮುಖ್ಯ ಗುರುಗಳು: ಶ್ರೀಮತಿ ಆದಿಲಾ ಬೇಗಂ
( ಬಿ.ಎ, ಬಿ.ಈಡಿ)
8861012329 – 6360484895

**ವರದಿ: ಚಂದ್ರಶೇಖರ ಪಾಟೀಲ್**

ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16

# ಡಾ. ಅಂಬೇಡ್ಕರ್ ರವರ ಮೌಲ್ಯ ಆದರ್ಶಗಳನ್ನು ಅಳವಡಿಸಿಕೊಂಡು ಉನ್ನತ ಶಿಕ್ಷಣವಂತರಾಗಿರಿ : ದುರುಗೇಶ್ ವಕೀಲರು

ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಟಿ. ಕಲ್ಲಹಳ್ಳಿ ಗ್ರಾಮದಲ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ 134ನೇ ಜಯಂತಿ ಆಚರಣೆಯನ್ನು ತುಂಬಾ ಅದ್ದೂರಿಯಾಗಿ ಆಚರಿಸಿದರು. ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ನಾಮಫಲಕಕ್ಕೆ ಪುಷ್ಪ ನಮನವನ್ನು ಸಲ್ಲಿಸಿ, ಕಲ್ಲಹಳ್ಳಿಯ ಪ್ರಮುಖ ಬೀದಿಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು ವಕೀಲರಾದ ದುರುಗೇಶ್ ಅವರು ಮಾತನಾಡುತ್ತಾ ಮೊದಲು ನಾವು ಸಂವಿಧಾನವನ್ನು ಅರಿತು ಅಂಬೇಡ್ಕರ್ ಅವರ ಜೀವನದ ಮೌಲ್ಯಗಳು ಆದ-ರ್ಶವನ್ನು ಅಳವಡಿಸಿಕೊಂಡು ಅವರಂತೆಯೇ ಉನ್ನತ ಶಿಕ್ಷಣವನ್ನು ಪಡೆಯಬೇಕು ಸಂವಿಧಾನವನ್ನು ಅರಿತು ಯುವಕರಲ್ಲಿ ಒಗ್ಗಟ್ಟನ್ನು ಮೂಡಿಸುವುದು, ಹಿಂದುಳಿದಂತಹ ನಾವು ಶಿಕ್ಷಣದಿಂದ ಮುಂದುವರಿಯಬೇಕು ಒಂದು ಒಳ್ಳೆಯ ಸ್ಥಾನವನ್ನು ಪಡೆದುಕೊಂಡರೆ ಅದಕ್ಕೆ ಸಾಕ್ಷಿ ನಮ್ಮ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನವನ್ನು ನಾವು ಶಿಕ್ಷಣದಿಂದ ಅದನ್ನು ಮೇಲೆತ್ತಿಕೊಂಡು ಅದರ ಅಡಿಯಲ್ಲಿ ನಮ್ಮ ಕಾರ್ಯ ಕಲಾಪಗಳನ್ನು ರೂಪಿಸಿಕೊಳ್ಳಬೇಕು ಹಾಗೂ ಅದರ ಮಹತ್ವವನ್ನು ತಿಳಿಸಬೇಕು, ಎಲ್ಲಾ ಪೋಷಕರು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕಲಿಸಿ ಆಗ ಮಾತ್ರ ದಲಿತರ ಏಳಿಗೆ ಸಾಧ್ಯ ಒಳ ಮೀಸಲಾತಿಯ ಸಮೀಕ್ಷೆ ತಾಲೂಕಿನಲ್ಲಿ ಪ್ರಾರಂಭವಾಗುತ್ತದೆ ಅಂತಹ ಸಂದರ್ಭದಲ್ಲಿ ಸಮೀಕ್ಷೆಯ ಬಂದಂತಹ ಅಧಿಕಾರಿಗಳೊಂದಿಗೆ ಜಾತಿಯ ಕಾಲಂ ಲ್ಲಿ ಯಾವುದೇ ತರದ ಆದಿ ಕರ್ನಾಟಕ, ಆದಿ ಜಂಬವ, ಹರಿಜನ, ಎಂದು ಪದಗಳನ್ನು ಬರೆಯಿಸಬೇಡಿ ಕಾಲಂ ನಲ್ಲಿ ಮಾದಿಗ ಎಂಬ ಪದವನ್ನು ಬರೆಸಿ ಎಂದು ಸಮುದಾಯದ ಜಾಗೃತಿಯನ್ನು ಮೂಡಿಸಿದರು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿಯ ಸದಸ್ಯರು, ದ.ಸಂ.ಸ ಸಂಘಟನೆಯ ಗ್ರಾಮ ಶಾಖೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಊರಿನ ಪ್ರಮುಖ ಮುಖಂಡರಾದಂತಹ ವೀರೇಶ್ ಗೌಡ್ರು, ವಿಜಯ್ ಗೌಡ್ರು, ಬೋಜಣ್ಣ ಹಾಗೂ ಮಾಜಿ ತಾಲೂಕ ಪಂಚಾಯತಿ ಸದಸ್ಯ ಕೆಬಿ ಸಿದ್ದಪ್ಪ ಹಾಗೂ ಕಾಂಗ್ರೆಸ್ ಯುವ ಮುಖಂಡರಾದ ಸಿದ್ದೇಶ್ ಬಿ, ಬಸವರಾಜ್ ಡಿ, ರುದ್ರಮುನಿ, ಕೆಂಚಪ್ಪ ಸಣ್ಣಬಸಪ್ಪ ಹಾಗೂ ಪ್ರಹ್ಲಾದ, ಎಮ್ ನಾಗರಾಜ್, ಅಡಿವಪ್ಪ, ಬಸವ ಪ್ರಭು, ಮಹಾಂತೇಶ್ ಹಾಗೂ ಮಹಿಳೆಯರು, ಕಾನಹೊಸಹಳ್ಳಿ ಆರಕ್ಷಕ ಠಾಣೆಯ ಸಿಬ್ಬಂದಿ ಸೇರಿದಂತೆ ಇನ್ನೂ ಹಲವರು ಸೇರಿದ್ದರು.






ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ

# ಬಸವಣ್ಣನವರ ದೃಷ್ಟಿಯಲ್ಲಿ ದೇವರೆಂದರೆ..!?

ಬಸವಣ್ಣನವರು ವಿಶ್ವದ ಮಹಾಚಿಂತಕರ ಗುಣವಿಶೇಷಗಳನ್ನೆಲ್ಲ ತಮ್ಮ ವ್ಯಕ್ತಿತ್ವದಲ್ಲಿ ಸಮಷ್ಟಿಗೊಳಿಸಿಕೊಂಡ ಮಹಾನ್ ಚೇತನ! ಆರ್ಥರ್ ಮೈಲ್ಡ್ ಹೇಳುವಂತೆ ಅವರು 'ಭಾರತದ ಪ್ರಪ್ರಥಮ ಸ್ವತಂತ್ರ ವಿಚಾರವಾದಿ'. ಬುದ್ಧನ ದಯೆ, ಮಹಾವೀರನ ಅಹಿಂಸೆ, ಕ್ರಿಸ್ತನ ಮಾನವ ಪ್ರೇಮ, ಗಾಂಧೀಜಿಯವರ ಸಾಮಾಜಿ-ಕ ಚಿಂತನೆ, ಮಾರ್ಕ್ಸ್ ನ ಆರ್ಥಿಕ ನೀತಿ, ಅಂಬೇಡ್ಕರ್ ಅವರ ದಲಿತೋದ್ಧಾರದ ದೃಷ್ಟಿ – ಈ ಎಲ್ಲವನ್ನು ಏಕೀಭವಿಸಿಕೊಂಡ ವಿಶೇಷತೆ ಬಸವಣ್ಣನವರದು. ಅವರ ಎರಡು ಆಶಯಗಳು ಸ್ವಾತಂತ್ರ್ಯ ಮತ್ತು ಸಮಾನತೆ ಅವರನ್ನು ಸಮಾಜ ಸುಧಾರಕ ಅನ್ನುವದಕ್ಕಿಂತ 'ಸಮಾಜ ಪರಿವರ್ತಕರು ' ಅನ್ನುವುದು ಸೂಕ್ತ..!

ಶರಣರ ತತ್ವಜ್ಞಾನ ಅವಿನಾಶವಾದ ಚೈತನ್ಯ ಮತ್ತು ನಾಶವಾಗದಂತ ವಸ್ತುವಿನ ಕುರಿತು ತಿಳಿಸುವಂಥ-'ದು. ಅವರ ಪ್ರಕಾರ ವಿನಾಶ ವಸ್ತುವಿನಲ್ಲಿ ಚೈತನ್ಯವೂ ಇದೆ ; ಚೈತನ್ಯ ವಸ್ತು ನಾಶವಾದಾಗ, ಚೈತನ್ಯ ರೂಪ ತಾಳಿ ಮೂಲ ಚೈತನ್ಯದಲ್ಲಿ ಲೀನವಾಗುತ್ತದೆ.




**ಕನ್ನಡಿಯ ನೋಡುವ ಅಣ್ಣಗಳಿರಾ**
**ಜಂಗಮವ ನೋಡಿರೆ**
**ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ**
**'ಸ್ಥಾವರ ಜಂಗಮ ಒಂದೇ' ಎಂದುದು**
**ಕೂಡಲಸಂಗಮ..**

ಬಸವಣ್ಣನವರ ಈ ವಚನವನ್ನು ನೋಡಿದಾಗ 'ವಸ್ತು ಮತ್ತು ಚೈತನ್ಯಗಳು ' ಅಂತಿಮ ಸತ್ಯದ ಕ್ಷಣದಲ್ಲಿ ಒಂದಾಗುವ 'ಸ್ಥಾವರ ಜಂಗಮ ಒಂದೇ' ಎಂಬುದರ ಅರಿವಾಗುವುದು. ಈ ತತ್ವಜ್ಞಾನದ ಮೂಲಕ ಶರಣರು ಜೀವ ಜಗತ್ತಿಗೆ ನ್ಯಾಯ ಒದಗಿಸುವ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಿದ್ದು ಮಾನವ ಇತಿಹಾಸದಲ್ಲಿಯೇ ಅನುಪಮವಾಗಿದೆ! ಶರಣರ ದೇವರು ದೇಗುಲಗಳಲ್ಲಿ ಇಲ್ಲ; ಅವರ ದೇವರು ಚೈತನ್ಯದ ಪ್ರತೀಕವಾದ **"ಅರಿವು" ಜಂಗಮರೂಪಿ ದೇವರು..!**

**'ಜಂಗಮ' ಎಂದರೇನು..?**

1) **ಅನಂತವಾದ ನಿರಂತರವಾದ ಚೈತನ್ಯ**
2) **ಚೈತನ್ಯರೂಪಿ ದೇವರು.**
3) **ಚೈತನ್ಯ ರೂಪಿ ಅರಿವು.**
4) **ಚೈತನ್ಯ ಒಳಗೊಂಡ ಇಡೀ ವಿಶ್ವ.**
5) **ಜೀವ ಜಗತ್ತು.**
6) **ಮಾನವ ಕುಲ.**

ಬದುಕಲು ಯೋಗ್ಯವಾಗುವಂಥ ಸಮಾಜ ನಿರ್ಮಾಣಕ್ಕಾಗಿ ಶರಣ ಸಂಕುಲ ಕಂಡುಕೊಂಡ ಈ ಸತ್ಯವನ್ನು ಸಮರ್ಪಣಾಭಾವದಿಂದ ಸಾರುತ್ತ ಸಾಗುವ 'ಶರಣ' ಸಕಲ ಜೀವರಾಶಿ ಆನಂದಮಯವಾಗಿ ಇರಬೇಕು ಎಂಬುದು ಬಸವಣ್ಣನವರ ಆಶಯ. ಅದಕ್ಕೆ ದಯೆಯೇ ಶರಣ ಧರ್ಮದ ಜೀವಾಳ! ದಯವಿಲ್ಲದ ಧರ್ಮ ಅದ್ಯಾವುದಯ್ಯ-ಎಂದು ಕೇಳುತ್ತಾರೆ. ದೇವರು ಯಾರು ಎಂಬುದಕ್ಕೆ ಅವರು ತಮ್ಮ ವಚನದಲ್ಲಿ ಹೇಳುತ್ತಾರೆ.

**ಅನುದಿನದಲ್ಲಿ ಮಜ್ಜನಕ್ಕೆರೆದು ನೆನೆದು ಲಿಂಗ ಕರಿಗಟ್ಟಿತ್ತು**
**ನೀರನೊಲ್ಲದು, ಬೋನವ ಬೇಡದು, ಕರೆದಡೆ ಓ ಎನ್ನದು**
**ಸ್ಥಾವರ ಪೀಜೆ, ಜಂಗಮದ ಉದಾಸೀನ**
**ಕೂಡಲಸಂಗಯ್ಯನೊಲ್ಲ ನೋಡಾ.**

ಜಂಗಮವೆಂಬ ಸಮಾಜರೂಪಿಯಾದ ದೇವರು ನಮ್ಮ ಮುಂದೆ ಇದ್ದಾನೆ ಎನ್ನುತ್ತಾರೆ ಬಸವಣ್ಣನವರು. ಅರಿವಿಲ್ಲದ ಲಿಂಗದ ಪೂಜೆ ಸಲ್ಲದು ಎಂಬ ಅರ್ಥ.

**ಇನ್ನೊಂದು ವಚನದಲ್ಲಿ ಹೇಳುವುದಾದರೆ..!**

**ಉಳ್ಳವರು ಶಿವಾಲಯ ಮಾಡುವರು**
**ನಾನೇನು ಮಾಡಲಿ ಬಡವನಯ್ಯ**
**ಎನ್ನ ಕಾಲೇ ಕಂಭ, ದೇಹವೇ ದೇಗುಲ**
**ಶಿರವೇ ಹೊನ್ನ ಕಳಸವಯ್ಯ ಕೂಡಲಸಂಗಯ್ಯ**

ಅಂದರೆ ಮಾನವರೆಲ್ಲ ನಡೆದಾಡುವ ದೇವಾಲಯಗಳು. ಒಳಗಿನ ಆತ್ಮಸಾಕ್ಷಿ ಎಂಬ ಅರಿವು ಗುರುವಾಗುತ್ತದೆ, ದೇವರಾಗುತ್ತದೆ. ಇದು ಬಸವ ಧರ್ಮ, ಶರಣ ಧರ್ಮ. ಪ್ರತಿಯೊಬ್ಬರಲ್ಲಿ ದೇವರು ಇರುವಾಗ ಯಾರೂ ದೊಡ್ಡವರು ಅಥವ ಸಣ್ಣವರಲ್ಲ. ಸರ್ವಸಮತ್ವ ತತ್ವ ಇಲ್ಲಿ ಮುಖ್ಯವಾದುದು. ಶರಣು. (ಆಧಾರ)

**-ಹಮೀದಾ ಬೇಗಂ ದೇಸಾಯಿ ಸಂಕೇಶ್ವರ.**

ಕರುನಾಡ ಕಂದ
ಸಂಪುಟ 04 | ಸಂಚಿಕೆ 13
ದಿನಾಂಕ: 01-05-2025 ಪುಟಗಳು:16






# ಮದ್ಯದ ನಶೆಯಲ್ಲಿ ಚಿಕಿತ್ಸೆ ನೀಡಿದ ಸರ್ಕಾರಿ ವೈದ್ಯ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿರುವ ಸ್ಥಳೀಯ ಸರ್ಕಾರಿ ತಾಲೂಕ ಆಸ್ಪತ್ರೆಯಲ್ಲಿ ರಾತ್ರಿ ಕಾರ್ಯ ನಿರ್ವಹಿಸುತ್ತಿದ್ದ ಡಾ. ಸುರೇಶ್ ಹಿತ್ತಲಮನಿ  ಫುಲ್ ಟೈಟಾಗಿ ಹೃದಯ ರೋಗ ಕಾಯಿಲೆಯಿಂದ ಬಂದ ರೋಗಿಯನ್ನು ತಪಾಸಣೆ ಮಾಡಿ ಚಿಕಿತ್ಸೆ ನೀಡಿದ್ದಾರೆ ರೋಗಿಯ ಸಂಬಂಧಿಗಳು ಬೇಡ ನೀವು ನಶೆಯಲ್ಲಿದ್ದೀರಿ ಎಂದು ಹೇಳಿದರೂ ಐ ಡೋಂಟ್ ಕೇರ್ ಎನ್ನುತ್ತಾ..ತಾನು ನೆಟ್ಟಗೆ ನಿಲ್ಲಲು ಬಾರದ ಸ್ಥಿತಿಯಲ್ಲಿದ್ದರೂ ಹೊರಳಾಡುತ್ತಾ ರೋಗಿಗೆ ಚಿಕಿತ್ಸೆ ನೀಡಿದರು ಹೀಗಾದರೆ ಸರ್ಕಾರಿ ಆಸ್ಪತ್ರೆಯ ಈ ಡಾಕ್ಟರ್ ಗಳನ್ನು ನಂಬಿಕೊಂಡು ಬರುವ ಬಡ ರೋಗಿಗಳ ಕಥೆ ಕೇಳುವರು ಯಾರು?

**ವರದಿ ಮಂಜು.ಎಮ್. ಚಿಕ್ಕಣ್ಣವರ**



# 25 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ



**ಬೆಳಗಾವಿ:** ಚೆನ್ನಮ್ಮನ ಕಿತ್ತೂರಿನಲ್ಲಿ 25 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಶಾಸಕ ಬಾಬಾ ಸಾಹೇಬ್ ಪಾಟೀಲ್ ಅವರು ಭೂಮಿ ಪೂಜೆ ನೆರವೇರಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವಹಿಸಿ ಮಾತನಾಡಿದ ಶಾಸಕ ಬಾಬಾ ಸಾಹೇಬ್ ಪಾಟೀಲ್ ಮಾತನಾಡಿ ನಮ್ಮ ಸರ್ಕಾರ ಆಡಳಿತಕ್ಕೆ ಬಂದು ಪ್ರಥಮ ಕಿತ್ತೂರು ಉತ್ಸವದ ಪೂರ್ವಭಾವಿ ಸಭೆಗೆ ಆಗಮಿಸಿದಾಗ ಸಚಿವ ಸತೀಶ್ ಜಾರಕಿಹೊಳಿ ಅವರು ಕಿತ್ತೂರು ಪಟ್ಟಣದ ಅಭಿವೃದ್ಧಿಗೆ ಪ್ರತೀ ವರ್ಷ ಐದು ಕೋಟಿ ರೂಪಾಯಿ ಹಣವನ್ನು ಪಟ್ಟಣದ ಅಭಿವೃದ್ಧಿಗೆ ನೀಡುವುದಾಗಿ ಘೋಷಣೆ ನೀಡಿದ್ದರು ಆದರೆ ಪ್ರತಿ ವರ್ಷ ಆರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ ಇತ್ತೀಚೆಗೆ ಪೇಟೆಯ ರಾಜಮಾರ್ಗವಾದ ಕೋಟೆ ರಸ್ತೆಯನ್ನು ಅಗಲೀಕರಣ ಮಾಡಲು ಸಹಕರಿಸಿದಂತೆ ಸಚಿವರು ಸೋಮವಾರಪೇಟೆಯ ರಸ್ತೆ ಅಗಲೀಕರಣಕ್ಕೆ ಹಣವನ್ನು ಮಂಜೂರು ಮಾಡುವ ಮೂಲಕ ಸಹಕಾರ ನೀಡಬೇಕೆಂದು ಮನವಿ ಮಾಡಿಕೊಂಡರು ಈ ಕ್ರಮಗಳಿಂದ ಕಿತ್ತೂರಿನ ಐತಿಹಾಸಿಕ ವೈಭವವು ಮರಳಲಿದೆ ಎಂದು ಶಾಸಕ ಬಾಬಾ ಸಾಹೇಬ್ ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಮಾತನಾಡಿ ಕಿತ್ತೂರು ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಶಾಸಕ ಬಾಬಾ ಸಾಹೇಬ್ ಪಾಟೀಲ್ ಅವರು ತಮ್ಮ ಕ್ಷೇತ್ರದಲ್ಲಿ ಭರವಸೆ ನೀಡಿದಂತೆ ಕಾರ್ಯ ಪ್ರವೃತ್ತರಾಗಿದ್ದಾರೆ ಕಿತ್ತೂರು ಪಟ್ಟಣದ ಅಭಿವೃದ್ಧಿಗೆ ಸಾಕಷ್ಟು ಪಣ ತೊಟ್ಟು ಶಾಸಕರು ನಮ್ಮ ಇಲಾಖೆಯ ಜೊತೆಗೆ ಇತರೆ ಇಲಾಖೆಗಳಿಂದಲೂ ಅನುದಾನ ತಂದು ಪಟ್ಟಣ ಅಭಿವೃದ್ಧಿ ಮಾಡುತ್ತಿದ್ದಾರೆ ಅವರಿಗೆ ನಮ್ಮ ಅಭಯ ಹಸ್ತ ಯಾವಾಗಲೂ ಇರುತ್ತದೆ ಅದೇ ತೆರನಾಗಿ ಜನರ ಸಹಕಾರ ಸಹ ಅವರ ಜೊತೆಗಿರಬೇಕು ಎಂದರು. ಇದೇ ಸಂದರ್ಭದಲ್ಲಿ ಕಿತ್ತೂರು ತಾಲೂಕ ತಹಶೀಲ್ದಾರ ರವೀಂದ್ರ ಹಾದಿಮನಿ, ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಕಿರಣ್ ಗೋರ್ಪಡೆ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಸಂಜೀವ್ ಮಿರಜ್ಕರ್, ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಮಲ್ಲಯ್ಯ ಹಿರೇಮಠ, ಪಟ್ಟಣ ಪಂಚಾಯತ್ ಅಧ್ಯಕ್ಷ ಜೈ ಸಿದ್ದರಾಮ ಮಾರಿಹಾಳ, ಸೇರಿದಂತೆ ಸರ್ವ ಸದಸ್ಯರು ಹಾಗೂ ಮುಖಂಡರು ಹಾಜರಿದ್ದರು.

**ವರದಿ ಮಂಜು.ಎಮ್.ಚಿಕ್ಕಣ್ಣವರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 13
ದಿನಾಂಕ: 01–05–2025 ಪುಟಗಳು:16

# ಕಲ್ಬುರ್ಗಿ ವಿಭಾಗದ ಹೊಸ ತಾಲೂಕುಗಳಲ್ಲಿ ಹರ್ಷ

## ಕಂಪ್ಲಿ ತಾಲೂಕಿಗೆ ಹೊಸ ಬಿ.ಇ.ಒ ಕಚೇರಿ ಆರಂಭಕ್ಕೆ ಮುಹೂರ್ತ




**ಬಳ್ಳಾರಿ / ಕಂಪ್ಲಿ :** ಕಲಬುರಗಿ ವಿಭಾಗದ ಹೊಸ ತಾಲೂಕು ಕೇಂದ್ರಗಳಲ್ಲಿ ಬಿಇಓ ಕಚೇರಿ ಆರಂಭದ ಮುನ್ಸೂಚನೆ ಕಂಡುಬಂದಿರುವ ಹಿನ್ನೆಲೆ ಬಿ ಇ ಓ ಕಚೇರಿ ಆರಂಭದ ನಿರೀಕ್ಷೆಯಲ್ಲಿದ್ದ ತಾಲೂಕಿನ ಸಾರ್ವಜನಿಕರಲ್ಲಿ ಸಂತಸ ಮೂಡಿಸಿದೆ.

ಸಾರ್ವಜನಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕಲ್ಬುರ್ಗಿ ವಿಭಾಗ ವ್ಯಾಪ್ತಿಯ ಹೊಸ ತಾಲೂಕುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆರಂಭಕ್ಕೆ ಆಯಾ ಜಿಲ್ಲೆಗಳಲ್ಲಿ ರಚಿಸಿರುವ ಸೃಜನ ಸಮಿತಿ ಸಭೆ ನಡೆಸಿ ಮೇ 3ರೊಳಗೆ ಕಚೇರಿಗೆ ಪ್ರಸ್ತಾವ ಸಲ್ಲಿಸುವಂತೆ ಕಲಬುರಗಿ ವಿಭಾಗದ ಅಪರ ಆಯುಕ್ತರು ಏಪ್ರಿಲ್ 25ರಂದು ಸುತ್ತೋಲೆ ಹೊರಡಿಸಿದ್ದಾರೆ. ಕಲ್ಬುರ್ಗಿ ಜಿಲ್ಲೆಯ ಕಮಲಾಪುರ ಹೊಸ ತಾಲೂಕುಗಳಲ್ಲಿ ಬಿಇಒ ಕಚೇರಿ ಪ್ರಾರಂಭಕ್ಕಾಗಿ ಪೂರಕ ಪ್ರಕ್ರಿಯೆಯನ್ನು ಸಮಿತಿ ನಡೆಸಿದ್ದು ಏಪ್ರಿಲ್ 25 ರಿಂದ ಬಿ ಇ ಓ ಕಚೇರಿ ಆರಂಭವಾಗಲಿದೆ. ಕಮಲಾಪುರಕ್ಕೆ ಮಾತ್ರ ಬಿಇಓ ಕಚೇರಿ ಸೀಮಿತವಾಗಿರದೆ, ಕಲಬುರಗಿ ವಿಭಾಗದ ಎಲ್ಲಾ ಹೊಸ ಕಂದಾಯ ತಾಲೂಕುಗಳಲ್ಲಿ ಬಿಇಒ ಕಚೇರಿ ಆರಂಭಕ್ಕೆ ನಿಯಮಾನುಸಾರ ಕ್ರಮ ವಹಿಸಲು ಅಪರ ಆಯುಕ್ತರು ಮುಂದಾಗಿದ್ದಾರೆ.

**ಸುತ್ತೋಲೆಯಲ್ಲಿ ಸೂಚನೆ :** ಹೊಸ ತಾಲೂಕು ವ್ಯಾಪ್ತಿಗೆ ಒಳಪಡುವ ಕ್ಲಸ್ಟರ್ ಗಳು, ಶಾಲೆಗಳ ಪಟ್ಟಿ ಹೊಸ ಶೈಕ್ಷಣಿಕ ವಲಯ ಹೆಸರಿನಡಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ ವಿಭಾಗ) ಏಪ್ರಿಲ್ 29 ರ ಒಳಗೆ ಅಧಿಸೂಚನೆ ಹೊರಡಿಸಬೇಕು. ಹೊಸ ಬಿಇಓ ಕಚೇರಿಯಲ್ಲಿ ಹುದ್ದೆಗಳನ್ನು ಹೊಸದಾಗಿ ಸೃಜನ ಮಾಡದೆ ಸ್ಥಳಾಂತರಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಹುದ್ದೆಗಳನ್ನು ಸ್ಥಳಾಂತರಗೊಳಿಸುವ ಪ್ರಕ್ರಿಯೆ ನಡೆಸಲು ರಚನೆಯಾಗಿರುವ ಹೊಸ ಬಿಇಓ ಕಚೇರಿ ಸೃಜನ ಸಮಿತಿಗೆ ಜಿಲ್ಲಾ ಪಂಚಾಯಿತಿಯ ಸಿಇಒ ಅಧ್ಯಕ್ಷರಾಗಿ, ಡಿಡಿಪಿಐ ಕಾರ್ಯದರ್ಶಿಯಾಗಿ, ಡಯಟ್ ಪ್ರಾಂಶುಪಾಲರು ಸಂಬಂಧಿಸಿದ ಬಿಇಒ ಮಧ್ಯಾಹ್ನ ಉಪಹಾರ ಯೋಜನೆ ಜಿಲ್ಲಾ ಶಿಕ್ಷಣಾಧಿಕಾರಿ, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾ–ರಿಗಳು ಸದಸ್ಯರಾಗಿದ್ದು, ಜಿಲ್ಲಾ ಪಂಚಾಯತ್ ಸಿಇಒ ಸೂಚನೆಯಂತೆ ನಡೆಸುವ ಸಭೆಯಲ್ಲಿ ಕಚೇರಿ ಆರಂಭದ ಪ್ರಕ್ರಿಯೆಯನ್ನು ಚರ್ಚೆಯ ನಂತರ ಹುದ್ದೆಗಳ ಸ್ಥಳಾಂತರ ಕುರಿತು ಕೈಗೊಳ್ಳುವ ನಿರ್ಣಯದ ಪ್ರಸ್ತಾವನೆಯನ್ನು ಮೂರರೊಳಗೆ ಅಪಾರ ಆಯುಕ್ತ ಕಚೇರಿಗೆ ಸಲ್ಲಿಸಲು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ವರದಿ : ಜಿಲಾನಸಾಬ್ ಬಡಿಗೇರ್.



**"ಅತೀ ಶೀಘ್ರದಲ್ಲೇ ಸೃಜನ ಸಮಿತಿ ಸಭೆ ಕರೆದು ಕಂಪ್ಲಿ ಬಿ ಇ ಒ ಕಚೇರಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು".**

**ಹ್ಯಾರಿಸ್ ಸುಮೈರ್ ಎಂ. ಡಿ.**

**ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಬಳ್ಳಾರಿ.**



**"ಆದಷ್ಟು ಬೇಗನೆ ಸಭೆಯನ್ನು ಕರೆಯುವಂತೆ ಇದೇ ಶೈಕ್ಷಣಿಕ ಸಾಲಿನಲ್ಲಿ ಕಂಪ್ಲಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯನ್ನು ಪ್ರಾರಂಭಿಸುವಂತೆ ತಿಳಿಸುತ್ತೇನೆ".**

**ಜೆ. ಎನ್. ಗಣೇಶ.**

**ಶಾಸಕರು, ಕಂಪ್ಲಿ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ಕೈಮಗ್ಗ ನಿಗಮ ಮಂಡಳಿ.**

# ಶಾಲಾ ಪ್ರವೇಶಗಳು ಪ್ರಾರಂಭ




ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನ ಹಿಪ್ಪರಗಾ ಎಸ್. ಎನ್. ಗ್ರಾಮದಲ್ಲಿ ಹೆಸರುವಾಸಿಯಾದ ಶ್ರೀ ಗೌರಿ ಶಂಕರ ಪೂರ್ವ ಪ್ರಾಥಮಿಕ ಶಾಲೆಯು ಹಿಪ್ಪರಗಾ ಎಸ್ ಎನ್ ತಾಂಡಾದಲ್ಲಿ ಹಲವಾರು ವರ್ಷಗಳವರೆಗೆ ತನ್ನದೆಯಾದ ರೀತಿಯಲ್ಲಿ ಪರಿಣಾಮಕಾರಿ ಭೋದನಾ ಪ್ರಕ್ರಿಯೆಯನ್ನು ನಡೆಸುತ್ತಾ ಬಂದಿದೆ.

ನಮ್ಮ ಗ್ರಾಮದಲ್ಲಿ ಇಂತಹ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ ಶಾಲೆಯ ಸಂಸ್ಥಾಪಕರಾದ ಶ್ರೀ ದೇವೀಂದ್ರ ಪವಾರ ರವರಿಗೆ ಎಷ್ಟು ಕೋಟಿ ಧನ್ಯವಾದಗಳನ್ನು ಅರ್ಪಿಸಿದರೂ ಕಡಿಮೆಯೇ ಎಂದು ಪಾಲಕರು ಶಾಲೆಯ ಬಗ್ಗೆ ಹೆಮ್ಮೆಯಿಂದ ಹೇಳುತ್ತಾರೆ.

ಸಂಸ್ಥೆಯ ಸಂಸ್ಥಾಪಕರಾದ ಶ್ರೀ ದೇವೀಂದ್ರ ಪವಾರವರು ನಮ್ಮ ಸಂಸ್ಥೆಯಲ್ಲಿ ಈಗಾಗಲೇ ಪ್ರವೇಶಗಳು ಪ್ರಾರಂಭವಾಗಿವೆ ಆಸಕ್ತ ಪಾಲಕ ಹಾಗೂ ಪೋಷಕ ಬಂಧುಗಳು ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಈ ಕೂಡಲೇ ದಾಖಲಾತಿಯನ್ನು ಪಡೆದುಕೊಳ್ಳಬಹುದಾಗಿದೆ, ನಮ್ಮ ಶಾಲೆಯು ಉತ್ತಮವಾದ ವಾತಾವರಣ ಹಾಗೂ ಸಿಬ್ಬಂದಿ ವರ್ಗದವರಿದ್ದು, ಮಕ್ಕಳಿಗೆ ಮೂಲಭೂತವಾದ ಬೇಸಿಕ್ ತರಬೇತಿ ಮತ್ತು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ವಸತಿ ಶಾಲೆಗೆ ಆಯ್ಕೆಯಾಗಲು ಬೇಕಾದ ವಿಷಯಗಳ ಬಗ್ಗೆ ಅಧ್ಯಯನವನ್ನು ಮಾಡಿಸುತ್ತಾ ದಾಪುಗಾಲು ಇಡುತ್ತಿದೆ ಎಂದು ಹೇಳಿದರು.

ರೆಗ್ಯೂಲರ್ ತರಗತಿಗಳು ಮೇ ಮತ್ತು ಜೂನ್ ತಿಂಗಳಲ್ಲಿ ಪ್ರಾರಂಭವಾಗುತ್ತವೆ ಆಸಕ್ತರು ಈ ಕೆಳಗಿನ ನಂಬರ್ ಗೆ ಸಂಪರ್ಕಿಸಬಹುದಾಗಿದೆ : +918310051184

**ವರದಿ: ಚಂದ್ರಶೇಖರ ಪಾಟೀಲ್**

**"ಕರುನಾಡ ಕಂದ ಪತ್ರಿಕೆ" ನ್ಯೂಸ್ ಪೋರ್ಟಲ್ ಹಾಗೂ ಯೂಟ್ಯೂಬ್ ಚಾನೆಲ್ ಗೆ ಪಾರ್ಟ್/ಫುಲ್ ಟೈಮ್ ನಲ್ಲಿ ಕಾರ್ಯ ನಿರ್ವಹಿಸಲು ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು ಮಟ್ಟದಲ್ಲಿ ಸ್ಥಳೀಯ ವರದಿಗಾರರು ಬೇಕಾಗಿದ್ದಾರೆ.**

**18 ವರ್ಷದಿಂದ 45 ವರ್ಷದವರೆಗಿನ ಆಸಕ್ತರು ಸಂಪರ್ಕಿಸಬಹುದು.**

**TARGET ಇರುವುದಿಲ್ಲ**

**ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು, ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ ಕರೆ ಮಾಡಿ:**

**ಬಸವರಾಜ ಬಳಿಗಾರ, ಸಂಪಾದಕರು**
**Call & WhatsApp:**
**9986366909**
**www.karunadakanda.com**




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR